The motion for speedy recovery of Health to Sri Jayaprakash Narayan adopted by the House is reproduced below :—

"Praying speedy reovery to Sri Jayaprakash Narayan who is un-well Sri Jayaprakash Narayan is one of our great leader who is in the hospital today".

BUDGET ESTIMATES FOR 1979-80

General Discussion.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ, ಅರ್ಥ ಮಂತ್ರಿಗಳಾದ ಶ್ರೀಮಾನ್ ಯಾಹ್ಯಾ ಅವರ ಸುದೀರ್ಘ ಭಾಷಣವನ್ನು ಮನಗೊಟ್ಟು ಕೇಳಿದ್ದೇನೆ. ಕಳೆದ ಎರಡು ದಿವಸಗಳ ಅವಕಾಶದಲ್ಲಿ ನಾನು ಭಾಷಣವನ್ನು ಓದಿದ್ದೇನೆ. ಆಮೇಲೆ ಬಜೆಟ್ ಪಟ್ಟಿಯನ್ನು ಕೂಡ ಅವರು ಒದಗಿಸಿದ ಮೇಲೆ ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಸ್ವಾಮಿ ಅವರ ಭಾಷಣವನ್ನು ಕೇಳಿದರೆ, ಸರ್ಕಾರದ ಮಾತುಗಳನ್ನು ಕೇಳಿದಾಗ ಕರ್ನಾಟಕ ದಲ್ಲಿ ಹಾಲುಜೇನು ಹೊಳೆ ಹರಿಯುತ್ತದೆಯೋ ಎನ್ನುವ ಭಾವನೆ ಉಂಟಾಗುವ ರೀತಿಯಲ್ಲಿ ಮಾತನಾಡಿ ದ್ದಾರೆ. ಕಳೆದ ಏಳು ವರ್ಷಗಳಿಂದ ಅವರ ಪಕ್ಷ ಅಧಿಕಾರದಲ್ಲಿದೆ. ಅವರು ಪ್ರತಿವರ್ಷವೂ ಆಯುವ್ಯಯ ಪಟ್ಟಿಯನ್ನು ಮಂಡಿಸುತ್ತಾ ಬಂದಿದ್ದಾರೆ. ಈ ವರ್ಷವೂ ಕೂಡ ಆಯುವ್ಯಯ ವನ್ನು ಮಂಡಿಸಿದ್ದಾರೆ. ಆದರೆ ನಿಜವಾಗಿಯೂ ಈ ಆಯುವ್ಯಯ ಪಟ್ಟಿಯ ಒಳಹೊಕ್ಕು ನೋಡಿ ದಾಗ ಆಳವಾಗಿ ಅಭ್ಯಾಸ ಮಾಡಿದಾಗ ಅವರು ಹೇಳುವ ಎಲ್ಲಾ ಅಭಿವೃದ್ಧಿ ಕಾರ್ಯಗಳೇನಿವೆ ಅವು ಕನ್ನಡ ನಾಡಿನ ಕಡು ಬಡವರಿಗೂ ಮತ್ತು ಮಧ್ಯಮ ವರ್ಗದವರಿಗೂ ಕನ್ನಡಿಯಲ್ಲಿ ಗಂಟು ತೋರಿಸುವ ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅವರು ಕಳೆದ ಏಳು ವರ್ಷಗಳಿಂದ ಕರ್ನಾಟಕದ ಜನತೆಯನ್ನು ಮೃಗಜಲದ ಹಿಂದೆ ತೆಗೆದುಕೊಂಡು ಹೋಗುತ್ತಿದ್ದಾರೆ. ಜಿಂಕೆ ಅನೇಕ ಸಲ ಮೃಗಜಲವನ್ನು ನೋಡಿ ಅಲ್ಲಿ ನೀರಿದೆ ಇನ್ನೂ ಸ್ವಲ್ಪ ದೂರ ಹೋದರೆ ನೀರು ಸಿಕ್ಕುತ್ತದೆ ಎನ್ನುವ ಆಸೆಯಿಂದ ಓಡೋಡಿ ಹೋಗುವ ರೀತಿಯಲ್ಲಿ ಜನತೆಯನ್ನು ಇವರು ಕರೆದು ಕೊಂಡು ಹೋಗುತ್ತಿದ್ದಾರೆ ಇದು ಮೃಗಜಲಮಾತ್ರ ಎಂದು ಜನತೆಗೆ ಗೊತ್ತಾಗುತ್ತದೆ. ಅದಕ್ಕೆ ಕಾಲಾವ ಕಾಶ ಬೇಕಾಗುತ್ತದೆ. ಇದೇನೇ ಇರಲಿ ಇವತ್ತಿನದಿವಸ ಅವರು ಮಂಡಿಸಿದ ಒಂದು ಆಯುವ್ಯಯ ಪಟ್ಟಿ ನನ್ನ ದೃಷ್ಟಿಯಿಂದ ನೋಡಿದಾಗ ಇದು ಆಯುವ್ಯಯವನ್ನೇ ಮಾಡತಕ್ಕ ಒಂದು ಪಟ್ಟಿ ಎಂದು ಹೇಳ ಬಹುದು ಎಕ್ಸ್‌ಪೆಂಡೀಚರ್ ಓರಿಯಂಟೆಡ್ ಬಡ್ಜೆಟ್. ಮುಖ್ಯವಾಗಿ ಇದು ಹಣವನ್ನು ಖರ್ಚುಮಾಡು ತ್ತದೆ ಆದರೆ ಇದು ಎಕನಾಮಿಕ್ ಗ್ರೋತ್ ಒರಿಯೆಂಟೆಡ್ ಬಡ್ಜೆಟ್, ಎಂಪ್ಲಾಯಿಮೆಂಟ್ ಓರಿಯಂಟೆಡ್ ಬಡ್ಜೆಟ್ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು ಯಾವುದೂ ಅಲ್ಲ, ಖರ್ಚು ಮಾಡತಕ್ಕ ಒಂದು ವ್ಯವಸ್ಥೆ ಇದೆ. ಖರ್ಚು ಮಾಡುತ್ತಿದ್ದಾರೆ ನಿಜವಾಗಿಯೂ ಅವರು ಹೇಳಿದ ರೀತಿಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿಯಾಗಿದೆಯೇ? ಜನಸಾಮಾನ್ಯರ ಜೀವನ ಮಟ್ಟ ಹೆಚ್ಚಿದೆಯೇ ಇವತ್ತು ನಿರುದ್ಯೋಗ ಸಮಸ್ಯೆ ಬಿಡುಗಡೆಯಾಗಿದೆಯೆ ? ಇದನ್ನು ನಾವು ಒಂದೊಂದಾಗಿ ಆಲೋಚನೆ ಮಾಡಬೇಕಾಗುತ್ತದೆ.

೪-೦೦ಪಿ. ಎಂ.

ಸ್ವಾಮಿ, ನಾನು ಈ ಆಯುವ್ಯಯ ಪಟ್ಟಿಯ ಬಗ್ಗೆ ಮಾತನಾಡುವಾಗ ಇದನ್ನು ಒಂದು ರಾಜಕೀಯ ದೃಷ್ಟಿಯಿಂದ ಅಥವಾ ವಿರೋಧ ಪಕ್ಷದ ಒಬ್ಬ ನಾಯಕನಾಗಿ ನೋಡದೆ ಕರ್ನಾಟಕದ ಒಬ್ಬ ಶ್ರೀಸಾಮಾನ್ಯ ನಾಗಿ ಇದನ್ನು ಅಭ್ಯಸಿಸಿದಾಗ ಏನು ವಿಚಾರಗಳು ಬಂದಿವೆ ಅದನ್ನು ನಾನು ಪ್ರಥಮದಲ್ಲಿ ವ್ಯಕ್ತಮಾಡು ತ್ತಿದ್ದೇನೆ. ಇದನ್ನು ಒಂದು ಪಕ್ಷದ ದೃಷ್ಟಿಯಿಂದ, ರಾಜಕೀಯ ದೃಷ್ಟಿಯಿಂದ ಹೇಳುತ್ತಿಲ್ಲ. ಇದಕ್ಕೆ ಆಧಾರ ಏನೆಂದರೆ ಸರ್ಕಾರವೇ ಕೊಟ್ಟಂಥ ಅಂಕಿಸಂಖ್ಯೆಗಳು ಕಳೆದ ೭ ವರ್ಷಗಳಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ಅವರ ಸರ್ಕಾರ ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದಾರೆ. ನಮ್ಮದು ದೀನದಲಿತರ ಸರ್ಕಾರ. ಹಿಂದುಳಿದ ವರ್ಗದವರಿಗಾಗಿ, ಹರಿಜನರಿಗಾಗಿ, ಗಿರಿಜನರಿಗಾಗಿ ಅನೇಕ ಕಾರ್ಯಗಳನ್ನು ಮಾಡಿ ದ್ದೇವೆ. ಅವರ ಸ್ಥಿತಿಯನ್ನು ಉತ್ತಮಗೊಳಿಸಿದ್ದೇವೆ. ಸಮಾಜವಾದಕ್ಕೆ ಅದರಲ್ಲಿಯೂ ಬಡತನದ ರೇಖೆ ಗಿಂತ ಕೆಳಗೆ ಇರತಕ್ಕಂಥ ಜನರಿಗೆ ಮನೆ ಇಲ್ಲದವರಿಗೆ ಮನೆ, ಹೊಲ ಇಲ್ಲದವರಿಗೆಹೊಲ, ಉದ್ಯೋಗ ಇಲ್ಲದ ವರಿಗೆ ಉದ್ಯೋಗ ಕೊಡತಕ್ಕ ಮಾತುಗಳನ್ನಾಡಿ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದು ೭ವರ್ಷಗಳಿಂದ

ಆಡಳಿತವನ್ನು ನಡೆಸುತ್ತಿದ್ದಾರೆ ಇದಕ್ಕೆ ಅಳತೆಗೋಲು ಅಂದರೆ ರಾಜ್ಯದಲ್ಲಿ ವ್ಯವಸಾಯರಂಗದಲ್ಲಿ ಆದಂಥ ಅಭಿವೃದ್ಧಿ ಕಾರ್ಯ. ನಾನು ಈ ರಾಜ್ಯದ ಬೆಳವಣಿಗೆ ಬಗ್ಗೆ ಎರಡು ಅವಧಿಗಳನ್ನು ಆಯ್ಕೆಮಾಡಿದ್ದೇನೆ. ಮೊದಲನೆಯದು ಅಂದರೆ ೧೯೫೬ನೆಯ ಇಸವಿಯಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ೧೯೬೧-೬೨ ರಿಂದ ೧೯೭೦-೭೧ರೊಳಗಿನ ಅವಧಿ. ಇನ್ನೊಂದು ೧೯೭೧-೭೨ರಿಂದ ೧೯೭೭-೭೮ರ ಅವಧಿ. ಈ ಎರಡು ಅವಧಿಗಳನ್ನು ನಾನು ಆಯ್ಕೆ ಮಾಡಿಕೊಳ್ಳುವುದಕ್ಕೆ ಕಾರಣವಿಷ್ಟೆ. ಮೊದಲನೆಯದಾಗಿ, ಸರ್ಕಾರ ಅಭಿವೃದ್ಧಿ ಕಾರ್ಯಗಳಿಗಾಗಿ ವಿವಿಧ ರಂಗಗಳಲ್ಲಿ ೧೯೭೨ರಿಂದ ಏನು ಮಾಡಿದೆ ಎನ್ನುವುದು ಸುದೈವವೋ ದುರ್ದೈವವೋ ನನಗೆ ಗೊತ್ತಿಲ್ಲ. ಆಗಲೂ ನಾನು ವಿರೋಧಪಕ್ಷದ ಸದಸ್ಯನಾಗಿದ್ದ ಈ ಕಡೆ ಇದ್ದೆ ಈಗಲೂ ಈ ಕಡೆಯೇ ಇದ್ದೇನೆ. ಒಂದು ವರ್ಷದ ಅವಧಿ ಮಾತ್ರ ಬಿಟ್ಟರೆ. ಆದರೆ ಶ್ರೀಮಾನ್ ದೇವರಾಜ ಅರಸು ಅವರು ಆರು ತಿಂಗಳು ಮಟ್ಟಿಗೆ ಮಾತ್ರ ವಿರೋಧ ಪಕ್ಷದಲ್ಲಿದ್ದರು. ಅವರು ಸರ್ವೇಸಾಧಾರಣವಾಗಿ ಅಧಿಕಾರ ಪಕ್ಷದಲ್ಲೇ ಇದ್ದಾರೆ.

I would like to quote some figures from the Karnataka Draft. Five Year Plan 1978–83.

Rupees in crores

Sl. N.	Sector	III Plan period 1961–62	Annual plan period 1968–69	V Plan Approved Outlay 1978–79
1.	Agriculture and Allied Activities.	45.44 (18.46)	46.97 (24.60)	44.69 (13.46)
2.	Co-operation	21.22 (8.62)	8.44 (4.42)	7.50 (2.26)
3.	Water and Power Development	102.08 (41.46)	90.05 (47.16)	187.98 (56.62)
4.	Industry & Mining	15.74 (6.39)	8.13 (4.26)	11:76 (3.54)
5.	Transport and Communications	1.90 (5.14)	13.70 (7.17)	16.01 (4.82)
6.	Social and Community services	48.28 (19.61)	22.75 (11.91)	63.22 (19.04)

There are Economic Services and General Services which are of minor importance. I am quoting these figures so that we could have a comparative idea of devolopment.

Then I come to per capita income, which is as under :

State Income and National Income 1960–61 to 1977–78

Sl. No.	Item	1960–61	1971–72	1977–78
1.	State Income (Rs. crores) at 1956-57 prices	555.91	910.97	1,223.00
2.	Per capita State income			
	at current (Rupees) prices	286.00	540.00	840.00
	at 1956–57 prices	238.00	301.00	353.00

The per capita income between 1960–61 and 1971–72 is increased by Rs. 254 and between 1971–72 and 1977–78 by Rs. 71.

ಆದರೆ ೧೯೭೦–೭೧ರಿಂದ ಇಲ್ಲಿಯುವರೆಗೆ ಎಷ್ಟು ಹೆಚ್ಚಾಗಿದೆಂದು ನೋಡಿದರೆ ಅದು ಕೇವಲ ೭೧. ಅದೇ ರೀತಿ ನಾವು ಇದನ್ನು ಪರ್ ಕ್ಯಾಪಿಟಾ ಇನ್‌ಕಂಗೆ ಹೋಲಿಸಿ ನೋಡಿದರೆ ಬಹಳ ಕಡಿಮೆ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ, ನಾವು ಇಲ್ಲಿ ಬರೀ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದನ್ನು ನೋಡುವುದು ಮುಖ್ಯವಲ್ಲ ಅದು ಮಹತ್ವದ ಪ್ರಶ್ನೆಯಲ್ಲ. ನಿರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ನಾವು ಎಷ್ಟು ಹಳ್ಳಿಗಳಿಗೆ ವಿದ್ಯುತ್ ದೀಪವನ್ನು ಕೊಟ್ಟಿದ್ದೇವೆ ಮತ್ತು ಎಷ್ಟು ಎಕರೆಗೆ ನೀರಾವರಿಗೆ ಒದಗಿಸಿದ್ದೇವೆ ಎನ್ನುವುದು ಮುಖ್ಯ. ಮತ್ತು ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದ್ದೀರಿ ಎನ್ನುವುದನ್ನು ನೋಡಬೇಕಾಗುತ್ತದೆ. ಇವತ್ತು ಹಣದ ಬೆಲೆ ಕಡಿಮೆಯಾಗಿದೆ ಒಂದು ರೂಪಾಯಿಯ ಬೆಲೆ ೭೦ ಪೈಸೆಗೆ ಇಳಿದದು ೩೦ ಪೈಸೆಯವರೆಗೂ ಉಳಿದಿದೆ ಅದರ ಲೆಕ್ಕಾಚಾರ ಬಿಡೋಣ. ಆದರೆ ನೀವು ಏನು ಸಾಧಿಸಿದ್ದೀರಿ ಎಂಬುದನ್ನು ನೋಡಬೇಕಾಗಿದೆ.

Development of Power Sector and Progress in Rural Electrification: 1960-61 to 1977–78.

Item/Unit	1960–61	1971–72	1973–74	1977–78
Installed capacity at the end of the reference year (MV)	185.7	966.5	966.6	1,144.4
		There is an increase of 11,000 KW during that period of 10 years. During 1977–78 there is an increase of 200 K.W.		
Energy generated	1,093	4,933	4,579	4,723
		(The increase during the first 10 years is by thousand KW. During the second period it is only 800 and odd.		
Revenue villages electrified	4,063	10,075	12,644	15,160
		(There is an increase of 6000 villages during the first 10 years during the second period there is an increase of 5000 villages.		
H. I. P, Sets energised	0.168	1.496	1.877	2.593

ಭಾವಿಗಳಿಗೆ ಕೊಡಬೇಕಾಗಿದಂಥ ವಿದ್ಯುಚ್ಛಕ್ತಿಯು ಹೆಚ್ಚಳವಾಗಿಲ್ಲ,

ಇನ್ನು ಸ್ಕೂಲ್‌ಗಳ ಬಗ್ಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಟ್ಟು ನನ್ನ ವಿಚಾರವನ್ನು ಹೇಳಬಯಸುತ್ತೇನೆ.

Number of Schools and Enrolment .

Year	Primary Education	
	Number of Schools	Enrolment (In lakhs)
1960–61	23,923	10.53
1971–72	32,009	40.27
1973–74	32,840	42.12
1977–78	33,474	46.31

During the first 10 years there is an increase of 1000 primary schools. In attendance there is only 6% increase.

Secondary Education

Year	Number of Schools	Enrolment (In lakhs)
1960-61	778	2.54
1971–72	2,060	4.83
1973–74	2.203	5.36
1977–78	2,391	6.30

There is an increase of nearly 330 high schools.

Taxation

73.76	74.75	75.76	76.77	77.78	78.79
Crores 61	Crores 99	Crores 119	Crores 16.25	Crores 6.05	Crores 30

Total taxation is Rs. 331 crores.

ಸ್ವಾಮಿ, ಇನ್ನು ಪರ್ ಕ್ಯಾಪಿಟಾ ಇನ್‌ಕಂ ವಿಚಾರದಲ್ಲಿ ತಾವು ಈಗಾಗಲೇ ಹೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ೧೯೭೭-೭೮ನೇ ಇಸವಿಯಲ್ಲಿ ಕನ್ನಡಿಗರ ವರಮಾನ ೩೫೩ ರೂ.ಗಳು. ನಮ್ಮ ರಾಜ್ಯಸರ್ಕಾರ ಹೇರಿದ ಕರಭಾರ ೧೦೦ ರೂ.ಗಳು ಎಂದರೆ ೩೫೩ ರೂಗಳಲ್ಲಿ ೧೦೦ ಹೋದರೆ ಅವನ ಉತ್ಪನ್ನ ಕೇವಲ೨೫೩ ರೂ.ಗಳು ಮಾತ್ರ. ಪರ್ ಕ್ಯಾಪಿಟಾ ಇನ್‌ಕಂ ಬಗ್ಗೆ ಹೇಳುವಾಗ ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಕಳೆದ ೭ ವರ್ಷಗಳಲ್ಲಿ ಸರ್ಕಾರ ಅನೇಕ ಹೊಸ ಟ್ಯಾಕ್ಸ್‌ಗಳನ್ನು ಹಾಕಿದ್ದಾರೆ. ಅದರ ಜೊತೆಗೆ ಈವಾಗ ಇನ್ನು ಹೆಚ್ಚಿನ ಕರಭಾರಗಳನ್ನು ಹಾಕಿದ್ದೀರಿ ಸ್ವಾಮಿ. ಈ ಕರಭಾರದ ವಿಚಾರ ಬಂದಾಗ, ನಮ್ಮ ದಕ್ಷಿಣ ಭಾರತದ ಇತರೇ ರಾಜ್ಯಗಳಲ್ಲಿ ಎಷ್ಟಿದೆಂಬುದನ್ನು ನಾವು ನೋಡುವುದಾದರೆ ಪಕ್ಕದ ಕೇರಳ ರಾಜ್ಯದಲ್ಲಿ ೯೯, ತಮಿಳು ನಾಡಿನಲ್ಲಿ ೮೧, ಆಂದ್ರಪ್ರದೇಶದಲ್ಲಿ ೭೧ ಆದರೆ ಕರ್ನಾಟಕದಲ್ಲಿ ಮಾತ್ರ ೧೦೦ ನಾವು ಇದನ್ನು ಪಂಜಾಬ್ ಹರಿಯಾಣ ಮುಂತಾದ ರಾಜ್ಯಗಳಿಗೆ ಹೋಲಿಸುತ್ತಿಲ್ಲ. ಏತಕ್ಕೆಂದರೆ ಅಲ್ಲಿ ಇನ್ನೂ ಜಾಸ್ತಿ ಇದೆ. ಆದರೆ ನಾವು ದಕ್ಷಿಣ ಭಾರತದಲ್ಲಿ ನೋಡುವುದಾದರೆ ನಮ್ಮ ರಾಜ್ಯದಲ್ಲಿಯೇ ಹೆಚ್ಚಿನ ಕರಭಾರವಿದೆ.

ಶ್ರೀ ಎಸ್. ಎಂ. ಯಾಹ್ಯಾ.—ಪರ್ ಕ್ಯಾಪಿಟಾ ಇನ್‌ಕಂ ಹೈಯೆಸ್ಟ್ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸ ಬಯಸುತ್ತೇನೆ. ಏತಕ್ಕೆಂದರೆ ಅದರಲ್ಲೂ ಸ್ಪೆಷಲ್ ಸೆಕ್ರೆಟರಿ ಫಾರ್ ಪ್ಲಾನಿಂಗ್ ಶ್ರೀ ಡಿ. ಎಂ. ನಂಜುಂಡಪ್ಪನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಈ ಪುಸ್ತಕವನ್ನು ಅವರು ಬರೆಯದೇ ಹೋಗಿದ್ದರೆ ಈ ಅಂಕಿಸಂಖ್ಯೆಗಳು ಸಿಕ್ಕದೇ ಹೋಗಿದ್ದರೆ ನಿಜವಾಗಿಯೂ ನಮ್ಮ ಆರ್ಥಿಕ ಆರೋಗ್ಯ ನಿಜಸ್ಥಿತಿ ಗೊತ್ತಾಗುತ್ತಾ ಇರಲಿಲ್ಲ. ಇವತ್ತು ಏನಾಗಿದೆ ಎಂದರೆ ಆರ್ಥಿಕ ಆರೋಗ್ಯ ಹದಗೆಟ್ಟಿದೆ.

(MR. NANAIH in the Chair)

ನಾನು ಈಗಾಗಲೇ ಕೆಲವು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ ; ಸಮಯಾಭಾವದ ಕಾರಣ ಅಷ್ಟು ಮಾತ್ರ ಕೊಟ್ಟಿದ್ದೇನೆ. ಒಟ್ಟಿನಲ್ಲಿ ಹೇಳುವುದಾದರೆ ೧೯೬೦–೬೧ ಮತ್ತು ೧೯೭೦–೭೧ರಲ್ಲಿ ರಾಜ್ಯದಲ್ಲಿ ಏನೊಂದು ಅಭಿವೃದ್ಧಿಯಾಗಿತ್ತು ಅದರಂತೆ ಈಗ ಇರಿಗೇಷನ್‌ನಲ್ಲಾಗಲೀ, ಇಂಡಸ್ಟ್ರೀಸ್‌ನಲ್ಲಾಗಲೀ, ಪವರ್‌ನಲ್ಲಾಗಲೀ, ಎಜುಕೇಷನ್‌ನಲ್ಲಾಗಲೀ, ಸೋಷಿಯಲ್ ವೆಲ್‌ಫೇರ್‌ನಲ್ಲಾಗಲೀ ಯಾವುದೇ ವಿಚಾರದಲ್ಲಾಗಲೀ ಹೇಳಿಕೊಳ್ಳುವಂಥ ಅಭಿವೃದ್ಧಿಯ ಹೆಚ್ಚಳವೇನೂ ಆಗಿಲ್ಲ. ಇದರಲ್ಲಿ ಸ್ಪಷ್ಟವಾಗಿ ಅಂಕಿಸಂಖ್ಯೆಗಳೇ ನಿಜಸ್ಥಿತಿಯನ್ನು ಹೇಳಿಕೊಳ್ಳುತ್ತಿವೆ. ಸ್ವಾಮಿ, ಇದನ್ನು ನೋಡುವಾಗ ಇನ್ನೊಂದು ವಿಚಾರ ನನಗೆ ನೆನಪು ಬರುತ್ತಿದೆ. ಇವತ್ತು ಸರ್ಕಾರದವರು ಹೆಚ್ಚು ಹೆಚ್ಚಾಗಿ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಹೇಳುತ್ತಿದ್ದಾರೆ. ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚು ಕರಭಾರವನ್ನು ಹಾಕತಕ್ಕಂಥ ಅವಶ್ಯಕತೆ ಇದೆಯೆಂದೂ ಸಹ ಹೇಳುತ್ತಿದ್ದಾರೆ. ಅಭಿವೃದ್ಧಿಯಾಗುತ್ತಿರತಕ್ಕಂಥ ರಾಜ್ಯಗಳಲ್ಲಿ ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಮುಖ್ಯವಾಗಿ ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಏನೆಂದರೆ ನಾವು ಎಲ್ಲಾ ಕರಭಾರವನ್ನೂ ಕೊಟ್ಟಿದ್ದೇವೆ, ಹಣವನ್ನೂ ಕೊಟ್ಟಿದ್ದೇವೆ ; ಇದಕ್ಕೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳು ಆಗಿದೆಯೇ ? ಈ ಪ್ರಶ್ನೆಗೆ ಉತ್ತರವನ್ನು ನಾನು ಸರ್ಕಾರದವರಿಂದ ಪಡೆಯಬಯಸುತ್ತೇನೆ. ಯಾವ ಯಾವ ರಂಗದಲ್ಲಿ ಎಷ್ಟೆಷ್ಟು ಮಟ್ಟಿಗೆ ಅಭಿವೃದ್ಧಿ ಕಾರ್ಯಗಳು ಆಗಿವೆ ಎಂಬ ಬಗ್ಗೆ ಅಂಕಿಸಂಖ್ಯೆಗಳ ಮುಖಾಂತರ ಇದರಲ್ಲಿ ಹೇಳಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಅದನ್ನು ಡ್ರಾಫ್ಟ್ ಫೈವ್ ಇಯರ್ ಪ್ಲಾನ್ ಪುಸ್ತಕದಲ್ಲಿ ಹೇಳಿದ್ದಾರೆಯೇ ಹೊರತು ಮಾನ್ಯ ಅರ್ಥ ಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಅದನ್ನು ಹೇಳುವುದನ್ನು ಮರೆತಿದ್ದಾರೆ. ನಾನು ಒಂದೊಂದೇ ರಂಗವನ್ನು ತೆಗೆದುಕೊಂಡು ಅದನ್ನು ನಾನು ಹೇಳಬಯಸುತ್ತೇನೆ. ಸ್ವಾಮಿ, ಅದನ್ನು ಹೇಳುವುದಕ್ಕೆ ಮೊದಲು ಒಂದು ಮಾತನ್ನು ಪ್ರಥಮದಲ್ಲೇ ನಾನು ಹೇಳಬೇಕಾಗುತ್ತದೆ. ಮಾನ್ಯ ಅರ್ಥ ಮಂತ್ರಿಯವರು ೭ನೇ ಫೈನಾನ್ಸ್ ಕಮಿಷನ್ ರೀಪೋರ್ಟ್ ಬಗ್ಗೆ ಹೇಳಿದ್ದಾರೆ. ಕೇಂದ್ರ ಸರ್ಕಾರದವರಿಂದ ರಾಜ್ಯಕ್ಕೆ ಹೆಚ್ಚಿನ ಸಹಾಯ ಆಗತಕ್ಕಂಥಾದ್ದರ ಬಗ್ಗೆ ಹೇಳಿದ್ದಾರೆ. ಆದರೆ ಅವರು ಆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಿಲ್ಲ ; ಇರಲಿ. ಕೇಂದ್ರ ಸರ್ಕಾರದವರಿಂದ ಇತ್ತೀಚೆಗೆ ೨ ವರ್ಷಗಳಲ್ಲಿ ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ಮಾಡತಕ್ಕಂಥ ನೀತಿಯಲ್ಲಿ ಆದಂಥ ಬದಲಾವಣೆಗಳನ್ನು ನಾವು ಮೆಚ್ಚಬೇಕಾಗುತ್ತದೆ ; ಅದನ್ನು ಮೆಚ್ಚಿದ್ದೇವೆ. ಇವತ್ತು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ೧೧೦೬ ಕೋಟಿ ರೂಪಾಯಿಗಳ ಹೆಚ್ಚಿನ ಸಹಾಯ ದೊರೆತಿರುವುದನ್ನು ಇದರಲ್ಲಿ ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಮಿತ್ರರೂ ಹೇಳಿದ್ದಾರೆ. ಆಮೇಲೆ ಎಕ್ಸೈಸ್ ಡ್ಯೂಟಿ ಮೇಲಿನ ನಮ್ಮ ಷೇರನ್ನು ಹಿಂದಿನ ಸರ್ಕಾರದವರು ೨೦ ಪರ್ಸೆಂಟಿನಷ್ಟು ಕೊಡುತ್ತಿದ್ದರು. ಈಗ ಅದು ೪೦ ಪರ್ಸೆಂಟ್ ಆಗಿದೆ. ಇದು ಈಗ ಒಂದಕ್ಕೆ ಎರಡರಷ್ಟು ಆಗಿದೆ. ಇದರಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ಬಂದಿದೆ ಎಂದರೆ ೫೬ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಹಣ ಬಂದಿದೆ. ಅಲ್ಲದೇ ಇನ್‌ಕಮ್‌ಟ್ಯಾಕ್ಸ್‌ನಿಂದ ೬ ಕೋಟಿಗಳಷ್ಟು ಹೆಚ್ಚಿನ ಹಣ ಬಂದಿದೆ. ಇವತ್ತು ಇದು ಸಾಮಾನ್ಯವಾದ ಸಹಾಯವಲ್ಲ. ಮತ್ತು ಕೇಂದ್ರ ಸರ್ಕಾರದವರು ಅನೇಕ ಯೋಜನೆಗಳಿಗೆ ಹಣವನ್ನು ಕೊಡುತ್ತಿದ್ದಾರೆ. ಇವತ್ತು ಕುಡಿಯುವ ನೀರಿನ ಯೋಜನೆ ಇದೆ. ಹರಿಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕಾಗಿ, ರಸ್ತೆಗಳನ್ನು ಮಾಡುವುದಕ್ಕಾಗಿ, ಪೀಪಲ್ಸ್ ಹೌಸಿಂಗ್ ಸ್ಕೀಮ್‌ಗಾಗಿ ಮತ್ತು ಇದರ ಜೊತೆಗೆ ಅನೇಕ ಉದ್ಯಮಗಳಿಗೆ ಹಣ ಸಹಾಯವನ್ನು ಮಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಇವೆಲ್ಲ ಬಾಬುಗಳಿಗೆ ಹಿಂದಿನ ಸರ್ಕಾರ ಕೊಟ್ಟಿದ್ದಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಹಣವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದಕ್ಕಾಗಿ ಮಾನ್ಯ ಅರ್ಥ ಮಂತ್ರಿಯವರು ಕೇಂದ್ರ ಸರ್ಕಾರದವರಿಗೆ ಅಭಿನಂದನೆಯನ್ನು ಸಲ್ಲಿಸದೇ ಹೋದರೂ ಕರ್ನಾಟಕದ ಜನತೆಯ ಪರವಾಗಿ

ನಾನು ಕೇಂದ್ರ ಸರ್ಕಾರದವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇವತ್ತು ಕೇಂದ್ರದವರು ಹೆಚ್ಚಿನ ಮಟ್ಟದಲ್ಲಿ ಕೊಟ್ಟಂತಹ ಹಣಕಾಸಿನ ಸಹಾಯ ಇಲ್ಲದೇ ಹೋಗಿದ್ದರೆ ಇವತ್ತು ನಮ್ಮ ಮಾನ್ಯ ಅರ್ಥ ಮಂತ್ರಿಯವರು ಬಜೆಟ್‌ನಲ್ಲಿ ಏನೊಂದು ಹಣವನ್ನು ಹಂಚಿಕೆ ಮಾಡಿದ್ದಾರೆ ಅಷ್ಟೊಂದು ಉದಾರವಾಗಿ ಹಣವನ್ನು ಹಂಚಿಕೆ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಸರ್ಕಾರದವರಾಗಲೀ, ಮಾನ್ಯ ಅರ್ಥಮಂತ್ರಿಯವರಾಗಲೀ ತಪ್ಪು ತಿಳಿದುಕೊಳ್ಳು ವುದಿಲ್ಲವೆಂದು ನಾನಾದರೂ ಭಾವಿಸುತ್ತೇನೆ. ಮಾನ್ಯ ಯಾಹ್ಯಾರವರು ಅದೃಷ್ಟಶಾಲಿಗಳಾಗಿದ್ದಾರೆ. ಅವರು ಅರ್ಥ ಮಂತ್ರಿಗಳಾದ ಮೇಲೆ ಕೇಂದ್ರ ಸರ್ಕಾರ ಬದಲಾಗಿದೆ. ಅಲ್ಲಿ ಕೇಂದ್ರ ಸರ್ಕಾರ ಬದಲಾದ ಮೇಲೆ ನಮ್ಮ ರಾಜ್ಯಕ್ಕೆ ಹಣದ ಸುರಿಮಳೆಯಾಗುತ್ತಿದೆ. ಒಂದು ಸಲಕ್ಕೆ ಒಬ್ಬ ಕಡು ಬಡವನಿಗೆ ಲಾಟರಿ ಟಿಕೆಟ್‌ನಲ್ಲಿ ದೊಡ್ಡ ಮೊತ್ತದ ಹಣ ಸಿಕ್ಕಿದರೆ ಅವನಿಗೆ ಬಹಳಷ್ಟು ಸಂತೋಷವಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಹಣ ಬಂದಿದೆ. ಆ ಹಣವನ್ನು ಈ ಬಜೆಟ್‌ನಲ್ಲಿ ಹೇಳಿರುವಂತೆ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಹಾಗೆ ಬಂದ ಹಣ ಸರಿಯಾಗಿ ವಿನಿಯೋಗವಾಗಿ ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಮುಟ್ಟಬೇಕೋ ಅದು ಮುಟ್ಟುತ್ತಾ ಇದೆಯೋ ಎಂಬುದನ್ನು ನಾವು ಪರೀಕ್ಷೆ ಮಾಡಬೇಕಾಗಿದೆ. ಮಾನ್ಯ ಅರ್ಥಮಂತ್ರಿಯವರು ಹೆಚ್ಚಿನ ಹಣವನ್ನು ಇರಿಗೇಷನ್, ಪಿ.ಡಬ್ಲ್ಯು.ಡಿ. ಮತ್ತು ಎಜುಕೇಷನ್‌ಗೆ ಹಂಚಿದ್ದಾರೆ. ಅದಕ್ಕಾಗಿ ಆ ಹಣ ಮುಟ್ಟಿದೆಯೋ ? ಅವರು ಏನೊಂದು ಗುರಿಯನ್ನು ಹಾಕಿಕೊಂಡಿದ್ದಾರೆ ಆ ಗುರಿ ಸಾಧನೆಯಾಗು ತ್ತಿದೆಯೋ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಈ ಬಗ್ಗೆ ಗುರಿ ಸಾಧನೆಯಾಗಿಲ್ಲವೆಂದೇ ಹೇಳಬಹುದು. ಆದ್ದರಿಂದ ನಾನು ಆಗಲೇ ಹೇಳಿದ ಹಾಗೆ ಇದು ಎಕ್ಸ್‌ಪೆಂಡಿಚರ್ ಓರಿಯೆಂಟೆಡ್ ಬಜೆಟ್ ಆಗಿದೆ. ಬಜೆಟ್‌ನಲ್ಲಿ ಏನೊಂದು ಟಾರ್ಗೆಟ್‌ನ್ನು ಅಚೀವ್ ಮಾಡಬೇಕೆಂದು ಗುರಿ ಹಾಕಿಕೊಂಡಿ ದ್ದಾರೆ ಅದನ್ನು ಮಾಡಬೇಕು. ಈ ದೃಷ್ಟಿಯಿಂದ ನಾವು ಮುಂದೆ ಹೋಗಬೇಕಾದ ಅವಶ್ಯಕತೆ ಇದೆ. ನಾನು ಒಂದೊಂದೇ ವಿಚಾರವನ್ನು ಹೇಳುವಾಗ ತಾವು ಆ ಬಗ್ಗೆ ಆಲೋಚನೆ ಮಾಡಬೇಕು. ಮೊಟ್ಟ ಮೊದಲನೆಯವಾಗಿ ನಾನು ಅರಿಸಿಕೊಳ್ಳತಕ್ಕಂಥ ವಿಚಾರ ಎಂದರೆ ಪದೇ ಪದೇ ಸರ್ಕಾರದವರು ಇಡೀ ರಾಷ್ಟ್ರದಲ್ಲಿ ಲ್ಯಾಂಡ್‌ರಿಫಾರಂಸ್ ಬಗ್ಗೆ ಪ್ರಗತಿಪರವಾದ ಕಾನೂನನ್ನು ಮಾಡಿದಂಥ ಸರ್ಕಾರ ಬೇರೊಂದಿಲ್ಲ ಎಂದು ಎದೆ ಉಬ್ಬಿಸಿ ಹೇಳುತ್ತಿದ್ದಾರೆ. ಮಾನ್ಯ ಅರ್ಥಮಂತ್ರಿಯವರು ತಮ್ಮ ಭಾಷಣದಲ್ಲಿ "೧೯೭೮ರ ಡಿಸೆಂಬರ್ ಕೊನೆಯವರೆಗೆ ಸುಮಾರ ೨೭.೫ ಲಕ್ಷಕ್ಕೂ ಮೀರಿ ಗೇಣಿದಾರರಿಂದ ಅರ್ಜಿಗಳು ಬಂದಿದ್ದವು ; ಇವುಗಳಲ್ಲಿ ೪ ಲಕ್ಷ ಇಂಥ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ; ಉಳಿದವುಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ" ಎಂದು ಹೇಳಿದ್ದಾರೆ. ಇದನ್ನು ಹೇಳುತ್ತಾ ತಮ್ಮ ಭಾಷಣದಲ್ಲಿ ಅವರು ಮತ್ತೆ "ಹೆಚ್ಚುವರಿ ಭೂಮಿ ಇರುವುದಾಗಿ ಒಟ್ಟು ೧.೪೫ ಲಕ್ಷ ಘೋಷಣೆಗಳು ಬಂದಿದ್ದು ಅವುಗಳ ಪೈಕಿ ೭೨,೬೧೯ ಘೋಷಣೆಗಳನ್ನು ವಿಲೇವಾರಿ ಮಾಡಲಾಯಿತು ; ಈ ಹೆಚ್ಚುವರಿ ಭೂಮಿಯಲ್ಲಿ ೩೭,೦೫೩ ಎಕರೆಯಷ್ಟು ಭೂಮಿಯನ್ನು ಒಟ್ಟು ೬,೯೫೫ ಜನರಿಗೆ ಹಂಚಲಾಯಿತು. ಇವರಲ್ಲಿ ೩,೮೭೩ ಜನರು ಹರಿಜನ ಗಿರಿಜನರು ಇದ್ದಾರೆ" ಎಂದು ಹೇಳಿದ್ದಾರೆ. ಮತ್ತು ೩೭,೫೫೫ ಜನರಿಗೆ ಅಕ್ಯುಪೆನ್ಸಿ ರೈಟ್ಸ್‌ನ್ನು ಕೊಟ್ಟಿದ್ದೇವೆ ಎಂದು . ಹೇಳಿದ್ದಾರೆ.

ಭೂ ಸುಧಾರಣೆ ಕಾಯಿದೆಯನ್ನು ಜಾರಿಗೆ ತಂದು ಗೇಣಿದಾರರನ್ನು ಒಡೆಯನನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ ಎನ್ನುವುದನ್ನು ತೋರಿಸುವುದಕ್ಕಾಗಿ ನಾನು ಈ ಅಂಕಿ–ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಏಳು ಲಕ್ಷ ಗೇಣಿದಾರರಲ್ಲಿ ನಾಲ್ಕು ಲಕ್ಷ ಜನ ಕಾನೂನಿಗನುಗುಣವಾಗಿ ಆಕುಪೆನ್ಸಿಯಾಗಿದ್ದಾರೆ. ಇವರುಗಳು ಭೂ ಒಡೆಯರಾಗಬೇಕಾದರೆ, ಆ ಜಮೀನಿನ ಕಂದಾಯದ ೫೦–೧೫೦ ಪಟ್ಟಿನಷ್ಟು ಹಣವನ್ನು ತುಂಬಬೇಕು. ಆ ಹಣವನ್ನು ತುಂಬದ ಹೊರತು ಅವರು ಒಡೆಯರಾಗುವುದಿಲ್ಲ ಹಾಗಿರುವಾಗ, ನೀವೆಲ್ಲಾ ಭೂ ಒಡೆಯರಾಗಿದ್ದೀರೆಂದು ಜನರಿಗೆಲ್ಲಾ ಹೇಳಿ ಏತಕ್ಕೆ ಮೋಸ ಮಾಡುತ್ತಿದ್ದೀರಿ ? ಕರ್ನಾಟಕ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನವರು ಸುಮಾರು ಏಳು ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಗೇಣಿದಾರರಿಗೆ ಹಂಚುವರು ಎಂದು ಹೇಳುತ್ತಿದ್ದೀರಿ. ಆದರೆ, ಅನೇಕ ಗೇಣಿದಾರರೇ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಮುಂದೆ ಬರುತ್ತಿಲ್ಲ. ಏತಕ್ಕೆ ಗೊತ್ತೆ ? ಪ್ರತಿ ಗೇಣಿದಾರನಿಗೆ ಎರಡು ಸಾವಿರ ರೂಪಾಯಿಗಳವರೆಗೆ ಸಾಲ ಕೊಡಲಾಗುತ್ತಿದೆ. ಸಾಲದ ಮೇಲೆ ವಿಧಿಸುವ ಬಡ್ಡಿ ದರವೆಷ್ಟೆಂಬುದು ತಮಗೆ ಗೊತ್ತೆ ? ಹದಿನಾರು ಪರ್ಸೆಂಟ್. ಸಾಲ ಸಿಗಬೇಕಾದರೆ, ಗೇಣಿದಾರ ಎಷ್ಟು ಸಲ ಬ್ಯಾಂಕ್‌ಗೆ ಓಡಾಡಬೇಕಾಗುತ್ತದೆ ಮತ್ತು

ಅಲ್ಲಿನ ಅಧಿಕಾರಿಗಳಿಗೆ ಕೈ ಬೆಚ್ಚಗೆ ಮಾಡಬೇಕಾಗುತ್ತದೆಂಬುದು ತಮಗೆ ಗೊತ್ತೆ? ಇದನ್ನೆಲ್ಲ ಲೆಕ್ಕಾಚಾರ ಹಾಕಿ, ಸಾಲವನ್ನು ಬ್ಯಾಂಕಿನಿಂದ ಪಡೆಯುವುದೇ ಬೇಡವೆಂದು ರೈತರು ಹೇಳುತ್ತಿದ್ದಾರೆ. ಇದರ ಜೊತೆಗೆ ಭೂಸುಧಾರಣೆಯ ಸೆಕ್ಷನ್ ೪೪ರ ಪ್ರಕಾರ ಗೇಣಿದಾರ ಸರ್ಕಾರಕ್ಕೆ ಗೇಣಿಯನ್ನು ಕೊಡಬೇಕು. ಇದೆಲ್ಲಾ ಏತಕ್ಕೆ ಸ್ವಾಮಿ? ಇತ್ತ ಕಡೆ ಗೇಣಿದಾರ ಆಕ್ಯುಪೆನ್ಸಿ ಪ್ರೈಸ್ ಕಟ್ಟಬೇಕು ಸರ್ಕಾರಕ್ಕೆ ಗೇಣಿ ಕೊಡಬೇಕು ಮತ್ತು ಅತ್ತ ಕಡೆ ಬ್ಯಾಂಕಿನಿಂದ ಸಾಲ ತೆಗೆದುಕೊಂಡರೆ, ಅದಕ್ಕೆ ಬಡ್ಡಿ ಕೊಡಬೇಕು. ಇಷ್ಟೆಲ್ಲಾ ಕೊಟ್ಟು ಅವನು ಎಂದು ಒಡೆಯನಾಗುವನು? ಇದೆಲ್ಲಾ ಕನಸು; ಪ್ರಜಾರಾತ್ಮಕವಾಗಿ ಮಾಡುತ್ತಿರುವ ಒಂದು ತಂತ್ರ. ಗೇಣಿದಾರನಿಗೆ ಭೂ ಒಡೆತನ ಕೊಡುವ ಮನಸ್ಸು ಸರ್ಕಾರಕ್ಕಿಲ್ಲ. ನಾನು ಮುಂಬಯಿ ಕರ್ನಾಟಕದಿಂದ ಬರುತ್ತಿರುವವನು. ಈಗಿನ ಪ್ರಧಾನ ಮಂತ್ರಿಗಳು ಆಗ ಅಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಆ ಕಾಲದಲ್ಲಿ ಅಲ್ಲಿ ಗೇಣಿ ಶಾಸನ ಜಾರಿಗೆ ಬಂತು. Whether they pay compensation or not the tillers should be the owners from 1-8-56.

4-30 P.M.

ಈ ಸರ್ಕಾರ ನಿಜವಾಗಲೂ ಗೇಣಿದಾರರ ಪರವಾಗಿದ್ದರೆ, ನಾಳೆ ಏಪ್ರಿಲ್ ಒಂದನೇ ತಾರೀಖಿನಿಂದ ಭೂ ನ್ಯಾಯಾಧೀಕರಣ ಮಂಡಲಿಗಳಲ್ಲಿ ಗೇಣಿದಾರರ ಪರವಾಗಿ ದರಖಾಸ್ತು ಇತ್ಯರ್ಥವಾದರೆ, ಆಕ್ಯುಪೆನ್ಸಿ ರೈಟನ್ನು ನ್ಯಾಯಾಧಿಕರಣ ಮಂಡಲಿಯ ತೀರ್ಮಾನದೊಂದಿಗೆ ಗೇಣಿದಾರರು ಹೊಂದುವರು ಮತ್ತು ಅವರೇ ಅಂದಿನಿಂದ ಭೂ ಒಡೆಯರು ಎಂದು ಘೋಷಣೆ ಮಾಡಬೇಕು. ಆದರೆ, ಅದನ್ನಿವರು ಮಾಡುತ್ತಾ ಇಲ್ಲ. ಇವತ್ತು ಗೇಣಿದಾರನಿಗೆ ಹಂತ ಹಂತವಾಗಿ ಹಣ ಕಟ್ಟಿ ಒಡೆಯನಾಗಲಿಕ್ಕೆ ಸಾಧ್ಯವಿಲ್ಲ. ಆದರೂ, ಇಂತಹ ಒಂದು ಕಲಂನ್ನು ಸರ್ಕಾರದವರು ಏತಕ್ಕೆ ಇಟ್ಟುಕೊಂಡಿದ್ದಾರೆನ್ನುವುದು ನನಗೆ ಅರ್ಥವಾಗಿದೆ. ಇದರಲ್ಲಿ ರಾಜಕೀಯ ಉದ್ದೇಶವಿದೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಗೇಣಿದಾರನಿಗೆ ಭೂ ಒಡೆತನವನ್ನು ಕೊಟ್ಟುಬಿಟ್ಟರೆ ಅವರು ಮುಂದೆ ನಮಗೆ ಮತ ಕೊಡುವರೋ ಇಲ್ಲವೋ ಎನ್ನುವ ಅನುಮಾನ ಇವರಿಗಿದೆ. ಆದುದರಿಂದ, ಅವರನ್ನು ಹಾಗೆ ಇಡೋಣವೆಂದು ಇವರು ಭಾವಿಸಿದ್ದಾರೆ. ನಿಮಗೆ ಒಡೆತನ ಕೊಡ್ತೀವಿ, ಕೊಡ್ತೀವಿ ಅಂತ ಇವರು ಹೇಳ್ತಾ ಇರುತ್ತಾರೆ, ಅವರು ಇವರಿಗೆ ಮತ ಕೊಡುತ್ತಾ ಕೊಡುತ್ತಾ ಇರುತ್ತಾರೆ.

ಶ್ರೀ ಎಸ್.ಎಂ. ಯಾಹ್ಯಾ :—ನಿಮಗೇತಕ್ಕೆ ಅವರು ಮತ ಕೊಡುವುದಿಲ್ಲ. ನೀವು ನಮಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ :—ಈಗ ನಾವು ಹೇಳುತ್ತಿದ್ದೇವೆ; ಹಿಂದೆ ನಾವು ಹೀಗೆ ಹೇಳುತ್ತಿರಲಿಲ್ಲ. ನಿಮ್ಮಷ್ಟು ಮಾತಿನ ಜಾಲ ನಮಗೆ ಗೊತ್ತಿಲ್ಲ. ಜನರನ್ನು ಮಂಕು ಮಾಡುವ ಸೂಕ್ಷ್ಮ ಬುದ್ಧಿ ನಿಮ್ಮಲ್ಲಿದೆ; ನಮ್ಮಲ್ಲಿಲ್ಲ.

ಶ್ರೀ ಎಸ್. ಎಂ ಯಾಹ್ಯಾ :—ಜನ ಮಂಕರಲ್ಲ; ನಿಮಗಿಂತಲೂ ಜಾಣರಿದ್ದಾರೆ!

ಶ್ರೀ ಎಸ್. ಆರ್. ಬೊಮ್ಮಾಯಿ :—ನೀವು ಅವರನ್ನು ಮಂಕು ಮಾಡುತ್ತಿದ್ದೀರಿ!

ಶ್ರೀ ಜೆ. ಎಚ್. ಪಟೇಲ್ :—ಜನರು ಮಂಕರಲ್ಲ ಎನ್ನುವುದನ್ನು ೧೯೭೭ರ ಲೋಕಸಭಾ ಚುನಾವಣೆಯಲ್ಲಿ ತೋರಿಸಿರುವರಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ :—ಜಮೀನು ಇಲ್ಲದವರಿಗೆ ಜಮೀನು ಎಂದು ಇವರು ಹೇಳುತ್ತಿದ್ದಾರೆ. ಈ ರಾಜ್ಯದಲ್ಲಿ ಹರಿಜನರು ಎಷ್ಟಿದ್ದಾರೆನ್ನುವ ಸಂಖ್ಯೆ ಇವರಿಗೆ ಗೊತ್ತೆ? ೧೯೭೭-೭೮ರ ಜನಗಣತಿ ಪ್ರಕಾರ ಈ ರಾಜ್ಯದಲ್ಲಿ ನಲವತ್ತು ನಾಲ್ಕು ಲಕ್ಷ ಹರಿಜನರಿದ್ದಾರೆ. ಭೂ ನ್ಯಾಯಾಧಿಕರಣ ಮಂಡಲಿಗಳಲ್ಲಿ ಎಲ್ಲ ಅರ್ಜಿಗಳನ್ನು ಇತ್ಯರ್ಥ ಮಾಡಿದ ಮೇಲೆ ನಾಲ್ಕು ಲಕ್ಷ ಎಕರೆ ಜಮೀನು ಉಳಿಯಲಿದೆ ಎಂದು ಇವರು ಆಶೆ ಇಟ್ಟುಕೊಂಡಿದ್ದಾರೆ. ಹಾಗಾದರೆ, ನಲವತ್ತು ನಾಲ್ಕು ಲಕ್ಷ ಹರಿಜನರಿಗೆ ಮತ್ತು ಇತರ ಕೃಷಿ ಕಾರ್ಮಿಕರಿಗೆ ಎಲ್ಲಿಂದ ಭೂಮಿಯನ್ನು ಹಂಚುವಿರಿ? ಇವರೆಲ್ಲರಿಗೂ ಜಮೀನು ಕೊಡುವ ವ್ಯವಸ್ಥೆಯನ್ನು ನೀವು ಮಾಡುವಿರಾ? ಇದನ್ನೆಲ್ಲ ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇವರು ಮಾಡಿರುವ ಭೂ ಸುಧಾರಣ ಕಾಯಿದೆಯಲ್ಲೊಂದು ಮೂಲ ದೋಷವಿದೆ. ಮುಖ್ಯವಾಗಿ ಅದನ್ನು ತಿದ್ದುಪಡಿ ಮಾಡದೆ ಹೋದರೆ, ನಿಜವಾಗಿಯೂ ನಾವು

ಬಡವರಿಗೆ ಜಮೀನನ್ನು ಹಂಚುವುದಕ್ಕಾಗುವುದಿಲ್ಲ ಮತ್ತು ಹಂಚುವುದಕ್ಕೆ ಜಮೀನೂ ಸಹ ಉಳಿಯುವುದಿಲ್ಲ. ಹಿಂದೆ ಇದ್ದ ಕಾನೂನು ಪ್ರಗತಿಪರವಾಗಿರಲಿಲ್ಲವೆಂದು ಹೇಳುತ್ತಿದ್ದರು ; ಅದರಲ್ಲಿ ಗರಿಷ್ಠ ಮಿತಿ ಒಂದು ಕುಟುಂಬಕ್ಕೆ ೧೦೮ ಎಕರೆಗಳು. ಆದರೆ, ಈಗಿನ ಕಾನೂನು ಪ್ರಕಾರ ಮನೆಯಲ್ಲಿರುವ ಪ್ರತಿಯೊಬ್ಬ ವಯಸ್ಕನಿಗೂ ಐವತ್ನಾಲ್ಕು ಎಕರೆ ಜಮೀನನ್ನು ಇಟ್ಟುಕೊಳ್ಳಲು ಅವಕಾಶ ಕೊಡಲಾಗಿದೆ ; ಮತ್ತು ತರಿ ಭೂಮಿಯಾದರೆ ಹತ್ತು ಎಕರೆ ಇಟ್ಟುಕೊಳ್ಳಲು ಅವಕಾಶ ಕೊಡಲಾಗಿದೆ. ಇದನ್ನು ಮಾನ್ಯ ಸಚಿವ ಶ್ರೀ ಬಂಗಾರಪ್ಪನವರು ಕೇಳಬೇಕು. ಏಕೆಂದರೆ, ಅವರು ಇತ್ತಕಡೆ ಇದ್ದಾಗ, ಈ ಬಗ್ಗೆ ಬಹಳವಾಗಿ ವಾದ ಮಾಡುತ್ತಿದ್ದರು. ಈಗ ತಾವು ಮಾಡಿರುವ ಕಾನೂನು ಪ್ರಕಾರ ಪ್ರತಿಯೊಬ್ಬ ವಯಸ್ಕನಿಗೂ ಐವತ್ತು ಎಕರೆ ಜಮೀನು ಇಟ್ಟುಕೊಳ್ಳಲು ಅವಕಾಶವಿರುವಾಗ, ಒಂದು ಕುಟುಂಬದಲ್ಲಿ ಆರು ಜನ ವಯಸ್ಕ ಮಕ್ಕಳಿದ್ದರೆ, ಅವರ ಕುಟುಂಬಕ್ಕೆ ಎಷ್ಟು ಜಮೀನು ಹೋಗುತ್ತದೆಂಬುದು ತಮಗೆ ಗೊತ್ತೆ ? ಇಂದು ಒಟ್ಟು ಕುಟುಂಬದಲ್ಲಿ ಆರು-ನಾಲ್ಕು ಜನ ವಯಸ್ಕ ಮಕ್ಕಳಿದ್ದರೆ, ಪ್ರತಿ ವಯಸ್ಕನಿಗೆ ಐವತ್ತು ಎಕರೆ ಜಮೀನಿನಂತೆ ಎಷ್ಟು ಎಕರೆ ಜಮೀನು ಒಂದು ಕುಟುಂಬದಲ್ಲಿ ಉಳಿಯುತ್ತದೆಂಬುದು ತಮಗೆ ಗೊತ್ತೆ ? ಇದು ಪ್ರಗತಿಪರವಾದ ಕಾನೂನೆ ? ನಿಜವಾಗಲೂ ಹರಿಜನ-ಗಿರಿಜನರಿಗೆ ಭೂಮಿಯನ್ನು ಕೊಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದ್ದಿದ್ದರೆ ಇಂತಹ ಕಾನೂನೊಂದನ್ನು ಮಾಡುತ್ತಿರಲಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಈ ಕಾನೂನು ಬಂದ ಮೇಲೆ ಅನೇಕ ಜನ ಭೂಮಾಲಿಕರು ಇದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡಿದ್ದಾರೆ. ಅದಗಲ್ಲೂ ಮನೆಯಲ್ಲಿ ಹೆಚ್ಚು ಮಕ್ಕಳಿದ್ದವರು ಇದನ್ನು ಮತ್ತಷ್ಟು ಸಂತೋಷದಿಂದ ಸ್ವಾಗತ ಮಾಡಿದ್ದಾರೆ. ಆದುದರಿಂದ, ಭೂಸುಧಾರಣೆ ಕಾಯಿದೆಯಲ್ಲಿರುವ ಈ ಮೂಲ ದೋಷವನ್ನು ತಿದ್ದುಪಡಿ ಮಾಡದೆ ಹೋದರೆ, ನೀವು ಹೇಳುವುದೆಲ್ಲಾ ಬರೀ ಘೋಷಣೆಯಾಗಿ ಉಳಿಯುತ್ತದೆಯೇ ಹೊರತು, ಬಡವರಿಗೆ ಜಮೀನು ಹಂಚುವುದಕ್ಕಾಗುವುದಿಲ್ಲ. ಕೊನೆಗೆ ಜಮೀನು ಉಳಿಯದೆ, ಇದ್ದಬದ್ದ ಅರಣ್ಯವನ್ನು ಕಡಿದು ಅದನ್ನು ಸಾಗುವಳಿಗೆ ಕೊಡುವ ವ್ಯವಸ್ಥೆ ಮಾಡಬೇಕಾದೀತು. ಈ ವಿಚಾರವಾಗಿ ನನಗಿಂತಲೂ ಹೆಚ್ಚಾಗಿ ಶ್ರೀ ಜೆ. ಎಚ್. ಪಟೇಲರು ಮಾತನಾಡುವಾಗ ತಿಳಿಸುವರು. ಭೂಮಿ–ಈ ದೇಶದ ಮೂಲ ಬಂಡವಾಳ. ಇದನ್ನು ಸರಿಯಾಗಿ ಜನರಿಗೆ ಹಂಚಿ, ಅವರಿಗೆ ಯೋಗ್ಯ ಸಲಕರಣೆಗಳನ್ನು ಕೊಟ್ಟು, ದೇಶದಲ್ಲಿ ಯಥೇಚ್ಛವಾಗಿರುವ ಮಾನವ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳದೆ ಹೋದರೆ ಈ ರಾಷ್ಟ್ರಕ್ಕೆ ಉದ್ಧಾರವಿಲ್ಲ.

ರಾಷ್ಟ್ರದ ಮುಖ್ಯವಾದ ಮೂಲ ಸಂಪತ್ತು ಈ ರಾಜ್ಯದ ಮುಖ್ಯವಾದ ಸಂಪತ್ತು ಮಾನವಶಕ್ತಿ. ಈ ಮಾನವ ಶಕ್ತಿಯಾದ ಪ್ರತಿಯೊಬ್ಬ ಸದೃಢ ವಯಸ್ಕನಿಗೆ ಕೆಲಸ ಕೊಡತಕ್ಕ ಒಂದು ಕಾರ್ಯವನ್ನು ನಾವು ಮಾಡದೇಹೋದರೆ, ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರೇ ಒದಗಿಸಿರುವ ೧೯೭೧ನೇ ಇಸವಿ ಅಂಕಿಸಂಖ್ಯೆಗಳ ಪ್ರಕಾರ ಬೇಸಾಯಗಾರರ ಸಂಖ್ಯೆ ಸುಮಾರು ೪೦,೫೨,೮೭೬ ಬೇಸಾಯ ಕೂಲಿ ಕಾರ್ಮಿಕರು ಸುಮಾರು ೨೭,೧೭,೫೩೭, ಇತರೇ ಹರಿಜನರು ಗಿರಿಜನರು ಬೇರೆ ಬೇರೆಯವರು ಇದ್ದಾರೆ. ಅಂದರೆ ಈ ರಾಜ್ಯದ ಸುಮಾರು ಅರ್ಧಕ್ಕಿಂತ ಹೆಚ್ಚು ಜನ ಇವತ್ತಿನ ದಿವಸ ಭೂಮಿಯನ್ನೇ ಅವಲಂಬಿಸಿದ್ದಾರೆ. ಭೂಮಿಯ ಮೇಲೆ ಅವಲಂಭಿಸಿದಂತ ಈ ರಾಜ್ಯದ ವ್ಯವಸಾಯದಲ್ಲಿ ನವೀಕರಣ ಒಂದು ಯಾಂತ್ರೀಕರಣ ಬರದೇ ಹೋದರೆ, ಆರ್ಥಿಕ ಉತ್ಪನ್ನ ಹೆಚ್ಚಾಗುವುದಿಲ್ಲ. ಇದರ ಜೊತೆಗೆ ಹಳ್ಳಿಯಲ್ಲಿರತಕ್ಕ ಗ್ರಾಮಾಂತರ ಪ್ರದೇಶದಲ್ಲಿರತಕ ಬೇಸಾಯ ಕೂಲಿಗಾರರಿಗೆ ಕೈತುಂಬ ಕೆಲಸ ಕೊಡದೇ ಹೋದರೆ ಈ ರಾಜ್ಯದ ಉದ್ಧಾರ, ರಾಷ್ಟ್ರದ ಉದ್ಧಾರವಾಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಂಡಿದೆ ? ಕಳೆದ ೭ ವರ್ಷದಲ್ಲಿ ಏನು ಕೆಲಸ ಮಾಡಿದೆ ? ನನಗೆ ಗೊತ್ತಿದೆ. ಕಳೆದ ೨೭–೨೮ ವರ್ಷಗಳಲ್ಲಿ ಈ ದೇಶದ ಅಭಿವೃದ್ಧಿಯಾಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ವ್ಯವಸಾಯದ ಹುಟ್ಟುವಳಿಯಲ್ಲಿ ಹೆಚ್ಚುವರಿ ಆಗಿದೆ. ಔದ್ಯೋಗಿಕ ಉದ್ಯಮಗಳು ಬಂದಿವೆ. ಆದರೆ, ನಗರಗಳು ಬೆಳವಣಿಗೆಯಾಗಿವೆ, ಹಳ್ಳಿಗಳು ಮಾತ್ರ ಬೆಳವಣಿಗೆಯಾಗಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಜಮೀನಿನಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ ಸಿಗತಕ್ಕ ಸಂಬಳ ಎಷ್ಟು ? ಇಲ್ಲಿ ತಾವು ಸಂಖ್ಯೆ ಕೊಟ್ಟಿದ್ದೀರಿ, ೨ ರೂ. ನಿಂದ ೩–೫೦ ಪೈಸೆ ವರೆಗೆ ಕನಿಷ್ಠ ವೇತನ ಶಾಸನ ಪ್ರಕಾರ ೫ ರೂಪಾಯಿ ಇದೆ, ಆದರೆ ಕೊಡತಕ್ಕದ್ದು ಬಹಳ ಕಡಿಮೆ. ಕಾಫಿ ಪ್ಲಾಂಟೇಷನ್ ಜಾಗಗಳಲ್ಲಿ, ರೇಷ್ಮೆ ಉದ್ಯೋಗ ಇರತಕ್ಕ ಜಾಗಗಳಲ್ಲಿ,

The average daily rates of wages paid to Agricultural Labourers are as follows :-

	1973	1974	1975
Working hours	8	8	8
Skilled Labour :-			
Carpenter	5.22	5.88	6.44
Blacksmith	4.79	5.46	5.84
Mochies	3.71	4.15	4.59
Field Labour :-			
Men	3.11	3.54	3.71
Women	2.23	2.26	2,91
Children	1.53	1.81	2.00

ಪಟ್ಟಣಗಳಲ್ಲಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೆಲಸ ಮಾಡತಕ್ಕ ಒಬ್ಬ ಕೆಲಸಗಾರನ ದಿನದ ಸಂಬಳ ೨೪ ರೂಪಾಯಿ ೧೦ ಪೈಸೆಗಳು, ಅದೇ ರೀತಿ ಮತ್ತೊಂದು ಪಬ್ಲಿಕ್ ಸೆಕ್ಟಾರ್ ಇಂಡಿಸ್ಟ್ರೀಸ್‌ನಲ್ಲಿ ಕೆಲಸ ಮಾಡತಕ್ಕ ಕೆಲಸಗಾರನ ಒಂದು ದಿನದ ಸಂಬಳ ೨೨ ರೂಪಾಯಿ ೮೦ ಪೈಸೆಗಳು, ಅದೇ ಜಮೀನಿನಲ್ಲಿ ಕೆಲಸ ಮಾಡತಕ್ಕ ಬೇಸಾಯ ಕೂಲಿಗಾರನ ಒಂದು ದಿನದ ಉತ್ಪನ್ನ ೩ ರೂಪಾಯಿ, ಹೆಣ್ಣು ಮಕ್ಕಳಿಗೆ ೨ ರೂಪಾಯಿ, ಹುಡುಗರಿಗೆ ೧ ರೂಪಾಯಿ ೬೦ ಪೈಸೆಗಳು, ಇದನ್ನು ಬದಲಾವಣೆ ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ಎಂದು ಕೇಳುತ್ತೇನೆ. ಕನಿಷ್ಠ ವೇತನದ ಶಾಸನದ ಪ್ರಕಾರ ಗಂಡಸರಿಗೆ ೫ ರೂಪಾಯಿ, ಹೆಣ್ಣು ಮಕ್ಕಳಿಗೆ ೪ ರೂಪಾಯಿ ವೇತನ ಕೊಡಬೇಕೆಂದು ಇದೆ. ವಾಸ್ತವ ಪರಿಸ್ಥಿತಿ ಕಾರ್ಯಾಚರಣೆಯಲ್ಲಿ ಇರತಕ್ಕದ್ದು ಏನು ?

ಶ್ರೀ ಡಿ. ದೇವರಾಜ ಅರಸ್—ಧಾರವಾಡದ ಕಡೆ ಎಷ್ಟು ಕೊಡುತ್ತಿದ್ದೀರಿ ?

ಶ್ರೀ ಎಸ್. ಆರ್. ಬೋಮ್ಮಾಯಿ—೪ ರೂಪಾಯಿ ಕೊಡುತ್ತಿದ್ದೇವೆ. ಸುಗ್ಗಿ ಕಾಲದಲ್ಲಿ ೬ ರೂಪಾಯಿ ಕೋಡುತ್ತೇವೆ. ಮೊದಲಿನಿಂದಲೂ ಜೋಳ ಕೊಡತಕ್ಕಂಥ ಪದ್ಧತಿ ನಮ್ಮಲ್ಲಿ ಬಂದಿದೆ.

ಶ್ರೀ ಡಿ. ದೇವರಾಜ ಅರಸ್—ಎಷ್ಟು ಮಾಡೋಣ ಹೇಳಿ.

ಶ್ರೀ ಎಸ್. ಆರ್ ಬೊಮ್ಮಾಯಿ—ಅದನ್ನು ಹೇಳುತ್ತೇನೆ. ಆದರೆ, ಇಲ್ಲಿ ಅಭಿವೃದ್ಧಿ ಏನಾಗಿದೆ ? ವಕ್ಕಲುತನದ ಅಭಿವೃದ್ಧಿಯಲ್ಲಿ ಕೆಲವು ದೊಡ್ಡ ರೈತರಿಗೆ ಲಾಭವಾಗಿರಬಹುದು. ಪಟ್ಟಣದ ಕಾರ್ಮಿಕರಿಗೆ ಉದ್ಯಮಗಳಿಗೆ, ಹಾಗೂ ವ್ಯಾಪಾರಸ್ಥರಿಗೆ ಲಾಭವಾಗಿರಬಹುದು. ಇವೊತ್ತು ಈ ರಾಜ್ಯದಲ್ಲಿ ಬಡತನ ಹೋಗಬೇಕಾದರೆ ಒಂದು ಆರ್ಥಿಕವಾದಂಥ, ಸುಸಂಪನ್ನವಾದಂತ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ವಕ್ಕಲುತನಕ್ಕೆ ಹೆಚ್ಚು ಗಮನ ಕೊಡಬೇಕು. ಹಾಗೆ ಗಮನ ಕೊಡುವಾಗ ಬೇಸಾಯ ಕೂಲಿಗಾರರ ಬಗ್ಗೆ ಎಚ್ಚರ ವಹಿಸಬೇಕೆಂದು ಹೇಳುತ್ತೇನೆ. ತಾವು ಹೇಳಬಹುದು ಭೂ ಸುಧಾರಣ ಕಾನೂನನ್ನು ಜಾರಿಗೆ ತಂದಿದ್ದೇವೆಂದು, ಇವೊತ್ತು ಸಾವಿರಾರು ಮಂದಿ ಗೇಣಿದಾರರು ಭೂಮಿಯ ಒಡೆಯರಾಗಿಲ್ಲ. ಇಲ್ಲಿ ಪರಿಹಾರ ಕೊಡುವುದು ಬಿಡುವುದು ಪ್ರಶ್ನೆಯಲ್ಲ, ಗೇಣಿದಾರನನ್ನು ಭೂಮಿಯ ಒಡೆಯನನ್ನಾಗಿ ಮಾಡಬೇಕು. ಇವೊತ್ತು ಗೇಣಿದಾರ ಕಂದಾಯದ ೧೫೦ ಪಟ್ಟು ಹಣ ಕಟ್ಟದ ಹೊರತು ಭೂಮಿಯ ಒಡೆಯನಾಗುವುದಕ್ಕಾಗುವುದಿಲ್ಲ ನಾನು ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ.

Sri D. Devaraj Urs.—You are beating a dead horse.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಣ್ಣ ರೈತರಿಗೆ ಹಾಗೂ ಮಧ್ಯಮ ವರ್ಗದ ರೈತರಿಗೆ ಆರ್ಥಿಕವಾಗಿ ಸಹಾಯ ಕೊಡತಕ್ಕ ವ್ಯವಸ್ಥೆ ಆಗಬೇಕು. ಇವೊತ್ತು ರೈತರ ಸ್ಥಿತಿ ಏನಾಗಿದೆ ? ರೈತ ಬೆಳೆಯುತಕ್ಕ ಧಾರಣೆವಾಸಿಗಳ ಬೆಲೆ ಯಾವ ಮಟ್ಟದಲ್ಲಿದೆ ? ಮೊದಲು ಯಾವರೀತಿ ಇತ್ತು ? ಇವೊತ್ತಿನ ಪರಿಸ್ಥಿಯಲ್ಲಿ ಹೇಗಿದೆ ?

The Index Number of Wholesale Prices of Agricultural Commodities are as follows :—

	1974	1975	1976
Cereals :—	498.75	515.67	391.68

ಈಗ ಇಂಡೆಕ್ಸ್ ಪ್ರಕಾರ ರೈಸ್ ೩.೩೫೭. ೧೯೭೪ರಲ್ಲಿ ೪೫೬.೦೭, ೧೯೭೫ರಲ್ಲಿ ೪೮೬.೨೭, ೧೯೭೬ರಲ್ಲಿ ೩೮೪·೬೮. ವೀಟ್ ೧೯೭೪ರಲ್ಲಿ ೨೮೪.೬೭, ೧೯೭೫ರಲ್ಲಿ ೩೨೮.೦೦, ೧೯೭೬ರಲ್ಲಿ ೨೨೮.೬೮. ಜೋಳ, ರಾಗಿ ಇವುಗಳ ಬೆಲೆ ಅರ್ಧದಷ್ಟು ಕಡಿಮೆಯಾಗಿದೆ. ೧೯೭೪ರಲ್ಲಿ ಇದ್ದಂತಹ ಒಂದು ಬೆಲೆ, ಈ ಆಹಾರ ಧಾನ್ಯಗಳ ಬೆಲೆಯಾಗಲಿ, ಅಥವಾ ಈರುಳ್ಳಿ ಆಲೂಗಡ್ಡೆ ಬೆಲೆಯಾಗಲಿ, ಮೆಣಸಿನಕಾಯಿ ಬೆಲೆಯಾಗಲಿ, ಎಲ್ಲಾ ಬೆಲೆಗಳೂ ಬಿದ್ದು ಹೋಗಿ ಅದರ ಅಂಕಿಅಂಶಗಳನ್ನು ಸರ್ಕಾರದವರೇ ಪ್ರಕಟಣೆ ಮಾಡಿದ್ದರೆ ನಮ್ಮ ಕಡೆ ಚಕ್ಕಡಿ ಎಂದು ಹೇಳುತ್ತೇವೆ ಈರುಳ್ಳಿ ತೆಗೆದುಕೊಂಡುಬಂದರೆ ಅವನಿಗೆ ಸಿಕ್ಕತಕ್ಕದ್ದು ೨೫–೩೦ ರೂಪಾಯಿ. ಈ ರೀತಿ ಬೆಲೆ ಕಡಿಮೆಯಾದಾಗ ರೈತನನ್ನು ಉಳಿಸಲಿಕ್ಕೆ ರಾಜ್ಯ ಸರ್ಕಾರ ಏನು ಮಾಡಿದೆ ಅನ್ನುವುದೇ ನನ್ನ ಮುಂದೆ ಇರತಕ್ಕ ಮುಖ್ಯ ಪ್ರಶ್ನೆ. ಮಾನ್ಯ ಅರ್ಥಮಂತ್ರಿಗಳು ಈ ರೀತಿ ಹೇಳಿದ್ದಾರೆ. Maximum Production we are reaching 75 lakh tonnes of Foodgrains. 1.2 lakh tonnes of Sugarcane. 11 lakh tonnes of Cotton bale, 4 thousands tonnes of Tobaco. ೧೯೭೪ನೆ ಇಸವಿ ಬೆಲೆ ಆಧಾರದ ಮೇಲೆ ರೈತನಿಗೆ ಸಿಕ್ಕತಕ್ಕ ಬೆಲೆ, ಸರ್ಕಾರ ಕೊಡತಕ್ಕ ಸಪೋರ್ಟ್ ಪ್ರೈಸ್‌ನಲ್ಲಿ ೫೧೦೦ ಕೋಟಿ ರೂಪಾಯಿ ಹಣ ಕಳೆದುಕೊಳ್ಳುತ್ತಿದ್ದಾನೆ. ಕಬ್ಬು ಬೆಳೆದಂತಾದ್ದು ಆಗಲಿ, ಮೆಣಸಿನಕಾಯಿ ಬೆಳೆದಂತಾದ್ದು ಆಗಲಿ ಇವೊತ್ತು ಕರ್ನಾಟಕದ ರೈತ ಸುಮಾರು ೧,೦೦೦ ಕೋಟಿ ರೂಪಾಯಿ ಹಣದ ಹಾನಿಗೊಳಗಾಗಿದ್ದಾನೆ. ಇವೊತ್ತು ಸಾವಿರಾರು ಕೋಟಿ ರೂಪಾಯಿ ಕಳೆದುಕೊಂಡಿರತಕ್ಕಂತಹ ರೈತರಿಗೆ ಸರ್ಕಾರದಿಂದ ಯಾವರೀತಿಯು ಸಹಾಯ ಮಾಡಿದ್ದೀರಾ ? ರೈತರು ಕೊಡತಕ್ಕಂತಹದ್ದು ಕಡಿಮೆ ಬೆಲೆ ಇದೆ. ಅವರು ಕೊಳ್ಳತಕ್ಕಂತಹದ್ದು ಮಾತ್ರ ಜಾಸ್ತಿ ಬೆಲೆ ಇದೆ. ಹತ್ತಿ ಬೆಲೆ ಮಾತ್ರ ಕಡಿಮೆ ಇದೆ. ಆದರೆ ಬಟ್ಟೆ ಬೆಲೆ ಮಾತ್ರ ಕಡಿಮೆಯಾಗಲಿಲ್ಲ. ಅವನಿಗೆ ಬೇಕಾಗತಕ್ಕತಹ ಸಿಮೆಂಟ್ ಆಗಲಿ, ಸೀಮೆ ಎಣ್ಣೆ ಆಗಲಿ ಇತರ ಯಾವುದೇ ವಸ್ತುಗಳ ಬೆಲೆಯೂ ಕೂಡ ಕಡಿಮೆಯಾಗಿಲ್ಲ. ಇನ್ನು ತಾವು ಈ ಸಪೋರ್ಟ್ ಪ್ರೈಸ್ ವಿಚಾರ ಹೇಳಿದ್ದೀರಿ. ಇದರ ಅಂಕಿಅಂಶ ನನಗೆ ಬೇಕು. ಏಕೆಂದರೆ, ಎಷ್ಟು ಜನ ರೈತರಿಂದ ಎಷ್ಟು ಕ್ವಿಂಟಾಲ್ ರಾಗಿ, ಜೋಳ ಖರೀದಿ ಮಾಡಿದ್ದಿರಾ ? ಅದರ ಬಗ್ಗೆ ಏನೂ ಹೇಳಿಲ್ಲ. ಈಗಾಗಲೇ ತಮ್ಮ ಹತ್ತಿರ ಎರಡು ಲಕ್ಷ ಟನ್ ಸ್ಟಾಕ್ ಇದೆ. ಇರುವುದರಿಂದ ಅದನ್ನೇ ಪಬ್ಲಿಕ್‌ಗೆ ಡಿಸ್ಟ್ರಿಬ್ಯೂಷನ್ ಮಾಡಲಿಕ್ಕೆ ಸಾಧ್ಯವಿದೆ. ಆದುದರಿಂದ ಇನ್ನು ಹೆಚ್ಚು ಕೊಳ್ಳತಕ್ಕ ಮನಸ್ಸು ಸರ್ಕಾರಕ್ಕೆ ಇಲ್ಲ. ಏಕೆಂದರೆ ಇದನ್ನು ನಾನು ಸ್ವಂತ ಅನುಭವದಿಂದ ಹೇಳುತ್ತಾ ಇದ್ದೇನೆ. ಹಳ್ಳಿಯ ಲೆವಲ್‌ನಲ್ಲಿಯಾಗಲಿ, ತಾಲ್ಲೂಕ್ ಲೆವಲ್‌ನಲ್ಲಿಯಾಗಲಿ ಈವನ್ ಲೆವಿ ಪ್ಯಾಡಿ ಕೊಳ್ಳತಕ್ಕ ಸ್ಥಿತಿಯಲ್ಲಿ ತಹಶೀಲ್ದಾರರು ಇಲ್ಲ. ಒಂದೊಂದು ತಾಲ್ಲೂಕಿನಲ್ಲಿ ಸಾವಿರಾರು ಜನ ರೈತರು ಭತ್ತ ತೆಗೆದುಕೊಂಡು ಬಂದು ಮೂರು ನಾಲ್ಕು ದಿವಸ ಕಛೇರಿ ಮುಂದೆ ಕುಳಿತು ವಾಪಸ್ಸು ಹೋಗಿದ್ದಾರೆ. ಇನ್ನು ಹೈಬ್ರಿಡ್ ಜೋಳ ಒಂದು ಕ್ವಿಂಟಾಲ್ ಕೂಡ ಪರ್ಚೇಸ್ ಮಾಡಿಲ್ಲ. ರೈತರನ್ನು ಉಳಿಸಲಿಕ್ಕೆ ಸರ್ಕಾರ ಎಷ್ಟು ಖರೀದಿ ಮಾಡಿದ್ದಾರೆ ಎಂದು ತಿಳಿಸಬೇಕು. ಇವೊತ್ತು ರೈತ ಏನಾದರೂ ಮುಳುಗಿ ಹೋದ ಅಂದರೆ ದೇಶ ಮುಳುಗಿ ಹೋಗುತ್ತದೆ ಎಂದು ನನ್ನ ಭಾವನೆ. ಇವೊತ್ತು ರೈತ ಅಂದರೆ ಜಮೀನಿನ ಒಡೆಯನೇ ಅಲ್ಲ, ಜಮೀನಿನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕ, ಕಮ್ಮಾರ, ಇಡೀ ಹಳ್ಳಿಯ ಜನಾಂಗದ ಭವಿಷ್ಯ ಇರುತ್ತದೆ. ಇವೊತ್ತು ರೈತರ ಒಂದು ಆರ್ಥಿಕ ಸ್ಥಿತಿಯ ಮೇಲೆ ಇಡೀ ಗ್ರಾಮದಲ್ಲಿರತಕ್ಕ ಪ್ರತಿಯೊಬ್ಬ ಕಾರ್ಮಿಕನ ಅಥವಾ ನಾಗರೀಕನ ಭವಿಷ್ಯ ಅವಲಂಬಿಸಿರುತ್ತದೆ. ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ರೈತರ ಪರಿಸ್ಥಿತಿ ಉತ್ತಮಗೊಳ್ಳಬೇಕು. ರೈತನಿಂದ ಸಮನಾದ ಪಾಲು ಕಾರ್ಮಿಕರಿಗೆ ಸಿಕ್ಕಬೇಕು. ದೊಡ್ಡ ರೈತರಿಗೆ ಹಂಚಿಹಾಕುವ ವ್ಯವಸ್ಥೆ ಆಗಬಾರದು. ಅದರಲ್ಲಿ ಚಿಕ್ಕ ರೈತರಿಗೂ ಅನುಕೂಲವಾಗಬೇಕು. ಆದುದರಿಂದ ರೈತರಿಗೆ ಪ್ರತಿಯೊಂದರಲ್ಲೂ ಒಂದು ಯೋಗ್ಯವಾದ ಬೆಲೆಯನ್ನು ನಿಗದಿ ಮಾಡುವ ವ್ಯವಸ್ಥೆ ಮಾಡಬೇಕು. ಇವೊತ್ತು ಸಣ್ಣ ಕೈಗಾರಿಕೆ ನಡೆಸುವ ಒಬ್ಬ ಒಡೆಯ, ದೊಡ್ಡ ಕೈಗಾರಿಕೆ ನಡೆಸುವ ಒಡೆಯ ತನ್ನ ಕಾರ್ಖಾನೆಯಲ್ಲಿ ತಯಾರಾಗತಕ್ಕ ವಸ್ತುವಿನ ಬೆಲೆಯನ್ನು ನಿಗದಿ ಮಾಡುತ್ತಾನೆ. ಅವನು ಬಂಡವಾಳದಲ್ಲಿ ಎಷ್ಟು ಹಣ ಹಾಕಿದ್ದಾನೆ, ಕಾರ್ಮಿಕರಿಗೆ ಕೊಡತಕ್ಕ ಸಂಬಳ,

ತನ್ನ ಲಾಭ, ಬ್ಯಾಂಕಿಗೆ ಕೊಡತಕ್ಕ ಬಡ್ಡಿ, ಇವೆಲ್ಲವನ್ನೂ ಲೆಕ್ಕಾಚಾರ ಮಾಡಿ ಒಂದು ಮಿಾಟರ್ ಬಟ್ಟೆಗೆ ೫ ಅಥವಾ ೬ ರೂಪಾಯಿ ಬೆಲೆ ನಿಗದಿ ಮಾಡುವ ಹಕ್ಕು ಇರುತ್ತದೆ. ರೈತ ಸಾಲ ತೆಗೆದುಕೊಂಡು ಕಷ್ಟಪಟ್ಟು ಬೇಸಾಯ ಮಾಡುತ್ತಾನೆ. ಆದರೆ ಅವನ ಬೇಸಾಯ ಅನಿಶ್ಚಿತ, ಏಕೆಂದರೆ ಮಳೆ ಬಂದು. ಸರಿಯಾದ ಹವಾಮಾನ ಇದ್ದರೆ ಅವನಿಗೆ ಬೆಳೆ ಕೈಸೇರುತ್ತದೆ. ಇಲ್ಲದೇ ಹೋದರೆ ಅವನಿಗೆ ಬೆಳೆ ಕೈಸೇರುವುದಿಲ್ಲ. ಇಂತಹ ಅನಿಶ್ಚಿತ ಪರಿಸ್ಥಿತಿಯಲ್ಲಿ ಇರತಕ್ಕ ರೈತರು ಶ್ರಮಪಟ್ಟು ಬೆಳೆದಿದ್ದಕ್ಕೆ ಒಂದು ನಿಗದಿಯಾದ ಬೆಲೆ ಇಲ್ಲದಿದ್ದರೆ ಅವನ ಜೀವನ ಯಾವರೀತಿ ಉದ್ಧಾರವಾಗುತ್ತದೆ. ಅವನು ಯಾವಾಗ ಪೇಟೆ ಧಾರಣೆ ಏನಾಗುತ್ತದೋ ಎನ್ನುವ ಚಿಂತೆಯಲ್ಲಿಯೇ ಮುಪ್ಪಾಗುತ್ತಾನೆ. ಆದುದರಿಂದ ರೈತರು ಬೆಳೆಯತಕ್ಕ ಆಹಾರ ಪದಾರ್ಥಗಳಿಗೆ ಸರಿಯಾದ ಬೆಲೆಯನ್ನು ನಿಗದಿ ಮಾಡಬೇಕು. ಅದರ ಬಗ್ಗೆ ಯಾವರೀತಿ ಮಾಡಬೇಕು ಎಂದು ಅನೇಕ ರೀತಿಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ದಲ್ಲಿ ಚರ್ಚೆಯಾಗಿದೆ. ಅದರ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವುಗಳ ರೈತ ಬೆಳೆದಂತಾದ್ದು ಖರ್ಚು ಹೋಗಿ ಅವನ ಜೊತೆಯಲ್ಲಿ ಕೆಲಸ ಮಾಡಿದಂಥಹ ಕಾರ್ಮಿಕನಿಗೂ ಸರಿ ಯಾದಂಥಹ ರೀತಿಯಲ್ಲಿ ಅನುಕೂಲವಾಗುವಂತಹ ವ್ಯವಸ್ಥೆ ಮಾಡಬೇಕು. ಇದೆಲ್ಲಾ ಸರಿಹೋಗ ಬೇಕಾದರೆ ಮೊದಲನೆಯದಾಗಿ ಪ್ಯಾರಿಟಿ ಪ್ರೈಸ್ ನಿಗದಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೧೫ ಮೈಲಿ ಯೊಳಗೆ ಒಂದೊಂದರಂತೆ ಉಗ್ರಾಣಗಳಿರಬೇಕು. ಇಲ್ಲಿ ಯಾವ ರೈತನೇ ಆಗಲಿ ತಾನು ಬೆಳೆದ ಮಾಲನ್ನು ತಂದು ಇಡುವುದಕ್ಕೆ ಅವಕಾಶ ಇರಬೇಕು. ಅವನ ಮಾಲಿಗೆ ಶೇಕಡ ೭೫ ರಷ್ಟು ಹಣವನ್ನು ಕೂಡಲೇ ಕೊಡುವಂತಿರಬೇಕು. ತಾವು ಇದಕ್ಕೆ ಗ್ರಾಮ ಕೇಂದ್ರವೆಂದು ಬೇಕಾದರೂ ಕರೆಯಿರಿ, ಅಥವಾ ಅಭಿವೃದ್ಧಿ ಕೇಂದ್ರವೆಂದು ಬೇಕಾದರೂ ಕರೆಯಿರಿ. ಒಟ್ಟಿನಲ್ಲಿ ಅಲ್ಲಿ ರೈತನು ತರತಕ್ಕ ಮಾಲನ್ನು ಇಡಿಸಿಕೊಳ್ಳುವ ವ್ಯವಸ್ಥೆ, ಆ ಮಾಲಿಗೆ ಶೇಕಡ ೭೫ ರಷ್ಟು ಹಣವನ್ನು ಕೊಡುವ ವ್ಯವಸ್ಥೆ ಹಾಗೂ ಯೋಗ್ಯ ಬೆಲೆ ಬಂದಾಗ ಆ ಮಾಲನ್ನು ಮಾರಾಟ ಮಾಡುವ ವ್ಯವಸ್ಥೆ ಈ ಮೂರನ್ನೂ ಸರ್ಕಾರದವರು ಮಾಡಬೇಕು. ಈ ವ್ಯವಸ್ಥೆಯನ್ನು ಸರ್ಕಾರ ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೆ ಈ ರೈತ ಉದ್ಧಾರವಾಗುವುದಿಲ್ಲ. ನಾನು ಈ ಮಾತನ್ನು ಹೇಳಲು ಕಾರಣವಾದರೂ ಇಷ್ಟೆ, ಸಣ್ಣ ರೈತರು ತಮ್ಮಲ್ಲಿ ಹಣವಿಲ್ಲದಾಗ ತಮ್ಮಲ್ಲಿರತಕ್ಕ ಮಾಲನ್ನು ವ್ಯಾಪಾರಗಾರರಿಗೆ ಮಾರಾಟ ಮಾಡಿಬಿಡುತ್ತಾರೆ. ಅದು ಮಾರಾಟವಾಗಿ ಬೆಲೆ ಜಾಸ್ತಿಯಾದಾಗ ಆ ದುಡ್ಡು ವ್ಯಾಪಾರಿಗೆ ಹೋಗುತ್ತದೆಯೇ ಹೊರತು ರೈತನಿಗೆ ಬರುವುದಿಲ್ಲ.

೫-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ಇಷ್ಟೇ ಅಲ್ಲದೆ ರೈತನಿಗೆ ಅವಶ್ಯಕವಾಗಿ ಬೇಕಾಗತಕ್ಕ ವ್ಯವಸಾಯೋಪಕರಣ ಗಳು, ಔಷಧಿ, ಬಟ್ಟೆ, ಸೀಮೆ ಎಣ್ಣೆ, ಸೋಪು, ಇತ್ಯಾದಿಗಳೂ ಕೂಡ ಆ ಕೇಂದ್ರದಲ್ಲೇ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಏಕೆಂದರೆ ಅವನು ಪ್ರತಿಯೊಂದಕ್ಕೂ ಅಲೆಯುವುದು ತಪ್ಪಬೇಕು. ನಾನು ಆಗಲೇ ಹೇಳಿದಂತೆ ಈ ಕೇಂದ್ರಕ್ಕೆ, ಅಭಿವೃದ್ಧಿ ಕೇಂದ್ರವೆಂದಾದರೂ ಕರೆಯಿರಿ, ಗ್ರಾಮ ಕೇಂದ್ರ ವೆಂದಾದರೂ ಕರೆಯಿರಿ, ಅಥವಾ ಭಾಗ್ಯಜ್ಯೋತಿ ಕೇಂದ್ರವೆಂದಾದರೂ ಕರೆಯಿರಿ. ಒಟ್ಟಿನಲ್ಲಿ ಇಂಥ ಒಂದು ಉಗ್ರಾಣದ ವ್ಯವಸ್ಥೆ ಮೊದಲು ಆಗಬೇಕು.

ಇನ್ನು ಮೂರನೆಯದಾಗಿ ಹೇಳುವುದಾದರೆ ರೈತನಿಗೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕ ಸಾಲದ ವ್ಯವಸ್ಥೆ ಸಕಾಲದಲ್ಲಿ ಹಾಗೂ ಸುಲಭದಲ್ಲಿ ದೊರೆಯಬೇಕು. ಅದೂ ಕೂಡ ಆ ಕೇಂದ್ರದಲ್ಲೇ ಇರಬೇಕು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಸರ್ಕಾರೀ ಸೊಸೈಟಿಗಳ ಮೂಲಕ ರೈತನಿಗೆ ಸಾಲದ ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತೀರಿ. ಅಲ್ಲಿ ಹೋಗಿ ನೋಡಿದರೆ, ನೂರಕ್ಕೆ ೭೦ ರಷ್ಟೂ ಕೂಡ ಅದರ ಲಾಭವನ್ನು ರೈತ ಪಡೆದುಕೊಳ್ಳುವುದಕ್ಕಾಗುತ್ತಿಲ್ಲ. ಇದಕ್ಕೆ ಕಾರಣ ಆ ಸೊಸೈಟಿಗಳಲ್ಲಿರತಕ್ಕ ಲಂಚಗುಳಿತನ, ಅವ್ಯವಸ್ಥೆ, ದುರಾಡಳಿತ ಇನ್ನೂ ಮುಂತಾದ್ದು. ರೈತ ಸಾಲಕ್ಕೆ ಅರ್ಜಿ ಹಾಕ ಬೇಕಾದರೆ ಒಂದು ಪತ್ರವನ್ನು ತಯಾರು ಮಾಡಬೇಕು. ಅದಕ್ಕೆ ಹಕ್ಕಿನ ಪತ್ರ ಹಾಕಬೇಕು. ಅದನ್ನು ತರಬೇಕಾದರೆ ಎಷ್ಟು ಕಷ್ಟವಿದೆ ಎಂಬುದು ತಮಗೂ ಗೊತ್ತಿದೆ. ಕಾರ್ಯದರ್ಶಿಗೆ ಕಾಸು ಕೊಡದಿದ್ದರೆ ಯಾವ ಕೆಲಸವು ಆಗುವುದಿಲ್ಲ. ಪ್ರತಿವರ್ಷವೂ ಈ ಪತ್ರವನ್ನು ತಯಾರು ಮಾಡಬೇಕಾಗುತ್ತದೆ. ಆದೂ ಅಲ್ಲದೆ ರೈತ ಇಷ್ಟೆಲ್ಲಾ ದುಡ್ಡು ಖರ್ಚುಮಾಡಿ ಪತ್ರ ತಯಾರಿಸಿದರೂ ಆ ಸಾಲಿನ ಸೌಲಭ್ಯ

ಆತನಿಗೆ ಸಕಾಲದಲ್ಲಿ ಸಿಕ್ಕುವುದಿಲ್ಲ. ಅನೇಕ ಲೇವಾದೇವಿಗಾರರು ಅವನಿಗೆ ದುಡ್ಡು ಕೊಟ್ಟಿದ್ದು ಅವನ ಸಾಲ ಬಂದಮೇಲೆ ಬಡ್ಡಿ ಸಮೇತ ಅದನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ಸರ್ಕಾರದವರು ಕೈಗಾರಿಕೋದ್ಯಮಿಗಳಿಗೆ ಯಾವರೀತಿ ಸಾಲದ ವ್ಯವಸ್ಥೆ ಮಾಡಿದ್ದಾರೋ ಅದೇರೀತಿ ಸಣ್ಣ ರೈತ ಅಂದರೆ ೫-೧೦ ಎಕರೆ ಜಮೀನು ಇಟ್ಟುಕೊಂಡಿರತಕ್ಕವನಿಗೂ ಕೂಡ ಇಂತಿಷ್ಟು ಸಾಲವನ್ನು ಸಹಕಾರ ಸಂಘದವರಾಗಲಿ, ಅಥವಾ ಬ್ಯಾಂಕ್‌ಗಳಾಗಲಿ ಕೊಡಬೇಕೆಂದು ಒಂದು ನಿಗದಿಮಾಡಿ; ಆತನಿಗೆ ಒಂದು ಪಾಸ್‌ಬುಕ್‌ನ್ನು ಕೊಡಿ. ಆ ರೈತ ತನಗೆ ಅಗತ್ಯ ಬಿದ್ದಾಗ ತನಗೆ ಬೇಕಾದ ಬೀಜ, ಗೊಬ್ಬರ, ಔಷಧಿ, ಬಟ್ಟೆ ಮುಂತಾದುವುಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದರೆ ಈ ರೀತಿ ಪ್ರತಿವರ್ಷವೂ ಸಾಲಕ್ಕಾಗಿ ಅರ್ಜಿ ಹಾಕುವುದಾಗಲಿ, ಅದಕ್ಕೆ ಹಕ್ಕುಪತ್ರವನ್ನು ಒದಗಿಸುವ ಪದ್ಧತಿಯನ್ನಾಗಲಿ ವಿಧಿಸುವುದು ಸರಿಯಲ್ಲ. ತಾವು ಈ ನೀತಿಯನ್ನು ಅನುಸರಿಸಿದರೆ, ಸೊಸೈಟಿಯ ಕಾರ್ಯದರ್ಶಿಗೆ ಲಂಚ ಕೊಡುವುದು, ಬ್ಯಾಂಕ್‌ಗಳಿಗೆ ಅಲೆಯುವುದು ತಪ್ಪುತ್ತದೆ. ತಾವು ಇನ್ನೂ ಒಂದು ಕೆಲಸ ಮಾಡುವುದಾದರೆ ರೈತನಿಗೆ ಗೊಬ್ಬರಕ್ಕಾಗಿ, ಔಷಧಿಗಾಗಿ ದುಡ್ಡನ್ನು ಕೊಡುವ ಬದಲು ಗೊಬ್ಬರ, ಔಷಧಿ ಇವುಗಳನ್ನೇ ಕೊಟ್ಟರೆ ಇನ್ನೂ ಹೆಚ್ಚಿನ ಸಹಾಯ ಮಾಡಿದಂತಾಗುತ್ತದೆ. ಈ ಒಂದು ಪದ್ಧತಿಯನ್ನು ಕೆಲವು ಸ್ಟೇಟ್ ಬ್ಯಾಂಕ್ ಹಾಗೂ ರಿಜರ್ವ್ ಬ್ಯಾಂಕ್‌ನವರು ತಮ್ಮ ಕೆಲವು ಬ್ರಾಂಚ್‌ಗಳಲ್ಲಿ ಅನುಸರಿಸಲು ಒಪ್ಪಿಗೆಯನ್ನು ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಒಂದು ವೇಳೆ ಇದರ ಬಗ್ಗೆ ರಿಜರ್ವ್ ಬ್ಯಾಂಕ್‌ನವರ ಕಟ್ಟಡಗಳೇನಾದರೂ ಇದ್ದರೆ ಅವುಗಳನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಒಂದು ಮಾತನ್ನು ಹೆಮ್ಮೆಯಿಂದ ಹೇಳಬಯಸುವುದೇನೆಂದರೆ, ಕೇಂದ್ರದಲ್ಲಿ ಚೌದರಿ ಚರಣಸಿಂಗ್‌ರವರು ಅರ್ಥಮಂತ್ರಿಗಳಾಗಿ ಬಂದಮೇಲೆ ಆರ್ಥಿಕ ನೀತಿಯಲ್ಲಿ ಬದಲಾವಣೆ ಮಾಡಿ ನೂರಕ್ಕೆ ೪೦ ಭಾಗದಷ್ಟು ಹಣವನ್ನು ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಾಗಿ ಇಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಇದನ್ನು ಮಾನ್ಯ ಮುಖ್ಯ ಮಂತ್ರಿಯವರೂ ಸ್ವಾಗತ ಮಾಡಿದ್ದಾರೆ. ಅವರ ಸ್ವಾಗತಕ್ಕೆ ನನ್ನ ಅಭಿನಂದನೆಯನ್ನೂ ಸಲ್ಲಿಸಿದ್ದೇನೆ.

ಇನ್ನು ನಾಲ್ಕನೆಯದಾಗಿ ಹೇಳುವುದಾದರೆ, ಸಣ್ಣ ಕೈಗಾರಿಕೋದ್ಯಮಿಗಳಿಗೆ ಕೊಡುತ್ತಿರುವಂತೆ ೬ ಪರ್ಸೆಂಟ್, ೮ ಪರ್ಸೆಂಟ್‌ನಂತೆ ಸಣ್ಣ ರೈತರಿಗೂ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸಿಕೊಡಬೇಕು. ಆದರೆ, ನಾನು ದೊಡ್ಡ ದೊಡ್ಡ ರೈತರಿಗೆ ಈ ಅವಕಾಶವನ್ನು ಕಲ್ಪಿಸಿಕೊಡಿ ಎಂದು ಕೇಳುವುದಿಲ್ಲ. ಇಷ್ಟೇ ಅಲ್ಲದೆ, ರೈತನಿಗಿರತಕ್ಕ ಕಷ್ಟ ದೂರವಾಗಬೇಕಾದರೆ, ಮೊಟ್ಟ ಮೊದಲನೆಯದಾಗಿ ಪವರ್ ಛಾರ್ಜ್‌ಸ್‌ನ್ನು ಎಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಕಡಿಮೆ ಮಾಡಬೇಕು. ಬೇರೆ ರಾಜ್ಯಗಳಲ್ಲಿ ಈಗಾಗಲೇ ಈ ನೀತಿಯನ್ನು ಅನುಸರಿಸಿದ್ದಾರೆ.

ಈವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಶುಗರ್‌ಕೇನ್ ಮೇಲೆ ಮೂವತ್ತಾರು ಪರ್ಸೆಂಟ್ ಟ್ಯಾಕ್ಸನ್ನು ವಿಧಿಸಿದ್ದೀರಿ. ಕಬ್ಬನ್ನು ಬೆಳೆದಂತೆ ರೈತನೂ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ತೆಗೆದುಕೊಂಡು ಹೋದರೆ ಆತನು ರೋಡ್‌ಸೆಸ್‌ನ್ನು ಕೊಡಬೇಕು, ಪ್ರಾಜೆಕ್ಟ್ ಸೆಸ್ ಕೊಡಬೇಕು, ಹೆಲ್ತ್ ಸೆಸ್‌ನ್ನು ಕೊಡಬೇಕು. ಇನ್ನೂ ಅನೇಕ ಸೆಸ್‌ಗಳನ್ನು ಕೊಡಬೇಕಾಗಿರುತ್ತದೆ. ಸೆಸ್‌ಗಳನ್ನು ಕಡಿಮೆ ಮಾಡತಕ್ಕ ಪ್ರಯತ್ನವನ್ನು ಸರ್ಕಾರದವರು ಮಾಡಲೇ ಇಲ್ಲ. ಅಗ್ರಿಕಲ್ಚರಿಸ್ಟ್ ಇವರಿಂದಲೇ ಸುಮಾರು ೧೩ ಕೋಟಿ ರೂಪಾಯಿಗಳಷ್ಟು ಸೆಸ್ ಮುಖಾಂತರ ವಸೂಲು ಮಾಡುತ್ತಿದ್ದೀರಿ. ಅರ್ಥಮಂತ್ರಿಗಳು ಹೇಳುತ್ತಾರೆ, ಕಾನೂನನ್ನು ಮೇಲ್ ಮಟ್ಟದಲ್ಲಿ ತಂದಲ್ಲಿ ಇನ್ನೂ ಎರಡರಿಂದ ಮೂರು ಕೋಟಿ ರೂಪಾಯಿಗಳಷ್ಟು ಜಾಸ್ತಿ ಬರುತ್ತದೆಂದು ಹೇಳುತ್ತಾರೆ.

ಶ್ರೀ ಎಸ್. ಎಂ. ಯಾಹ್ಯಾ;—ಕಾಫಿ ಪ್ಲಾಂಟರ್ಸ್ ಇವರಿಂದ ೧೧ ಕೋಟಿ ರೂಪಾಯಿಗಳು ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ:—ಬರಲಿ ಬಹಳ ಸಂತೋಷ, ಆದರೆ ನಾನು ಹೇಳುತ್ತಿರುವುದೇನೆಂದರೆ ಬಹಳ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿರತಕ್ಕಂಥ ರೈತರಿಗೆ ಅವನು ಕೊಡತಕ್ಕಂಥ ಟ್ಯಾಕ್ಸ್ ವಿಚಾರವಾಗಿಯಾಗಲಿ, ಅವನು ಕೊಡತಕ್ಕಂಥ ಬೆಟರ್‌ಮೆಂಟ್ ಲೆವಿ ವಾಟರ್‌ರೇಟ್ ಇವಗಳನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡುವ ಬಗ್ಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್:—ಯಾರಿಂದಲೂ ಯಾವ ವಿಧವಾದ ಟ್ಯಾಕ್ಸ್‌ನ್ನು ತೆಗೆದುಕೊಳ್ಳಲೇ ಬಾರದೆಂದು ಹೇಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ:—ರೈತರಿಂದ ಟ್ಯಾಕ್ಸ್ ಎಂದರೆ ಬೆಟರ್‌ಮೆಂಟ್ ಲೆವಿ ಕಂದಾಯ ಇವೆ ಮುಂತಾದುವನ್ನು ವಸೂಲು ಮಾಡಲೇಬಾರದೆಂದು ಹೇಳುತ್ತಿಲ್ಲ ಯಾರು ರೈತರು ನೀರು ಸಿಗದೆ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲದೆ ತೊಂದರೆಗೆ ಒಳಗಾಗಿರುತ್ತಾರೋ ಅಂಥವರಿಂದ ಟ್ಯಾಕ್ಸ್‌ನ್ನು ತೆಗೆದುಕೊಳ್ಳಬಾರದೆಂದು ಹೇಳುತ್ತೇನೆ. ಮಲಪ್ರಭಾ, ಘಟಪ್ರಭಾ ಪ್ರದೇಶಗಳಲ್ಲಿರತಕ್ಕಂಥ ರೈತರಿಗೆ ತಮ್ಮ ಅಧಿಕಾರಿಗಳು ನೋಟೀಸ್‌ಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ನೋಟೀಸ್ ಕಳುಹಿಸಿರುವುದು ಇಂಗ್ಲೀಷ್‌ನಲ್ಲಿರುತ್ತವೆ. ರೈತರು ಇದನ್ನು ಓದಿ ಅರ್ಥಮಾಡಿಕೊಂಡು ಉತ್ತರ ಕೊಡುವುದಕ್ಕೆ ಸಾಧ್ಯ ವಾಗದೆ ಈ ವತ್ತಿನದಿವಸ ಸರ್ಕಾರ ಏನು ತೀರ್ಮಾನ ತೆಗೆದು ಕೊಂಡಿರುತ್ತದೋ ಅದು ಎಕ್ಸ್‌ಪಾರ್ಟಿಯಾಗಿರುತ್ತದೆ. ಓದು ಬರಹ ಬಾರದ ರೈತರಿಗೆ ಇಂಗ್ಲೀಷ್‌ನಲ್ಲಿ ನೋಟೀಸ್‌ಗಳನ್ನು ಕಳುಹಿಸಿ ಕೊಟ್ಟರೆ ಏನು ಪ್ರಯೋಜನವೆಂದು ಕೇಳುತ್ತೇನೆ. ಕನ್ನಡದಲ್ಲಿ ನೋಟೀಸ್‌ಗಳನ್ನು ಕಳುಹಿಸಿ ಎಂದು ಹೇಳಿದರೆ ಅವು ಇನ್ನೂ ಕನ್ನಡದಲ್ಲಿ ಪ್ರಿಂಟ್ ಆಗಿಲ್ಲವೆಂದು ಅಧಿಕಾರಿಗಳು ಉತ್ತರವನ್ನು ಕೊಡುತ್ತಾರೆ. ನಾನು ಹೇಳುವುದೇನೆಂದರೆ ಕನ್ನಡದಲ್ಲಿ ಪ್ರಿಂಟ್ ಆಗುವವರೆಗೂ ನೋಟೀಸ್‌ಗಳನ್ನು ಕಳುಹಿಸಬೇಡಿ, ಇಲ್ಲ ರೈತನು ಇಂಗ್ಲೀಷ್ ಕಲಿಯುವವರೆಗೂ ಈ ರೀತಿಯಾದ ನೋಟೀಸ್‌ಗಳನ್ನು ಕಳುಹಿಸುವುದನ್ನು ನಿಲ್ಲಿಸಿ, ಎರಡರಲ್ಲಿ ಯಾವುದಾದರೂ ಒಂದನ್ನು ಮಾಡಿದರೆ ಉತ್ತಮವೆಂದು ಭಾವಿಸುತ್ತೇನೆ. ಇದರ ಪರಿಣಾಮ ಏನಾಗಿದೆ ಎಂದರೆ ೪ ಸಾವಿರ ಜನ ರೈತರಿಗೆ ನೋಟೀಸ್ ಹೋಗಿ ಅವರಿಗೆ ಅದು ಅರ್ಥವಾಗದೆ ಅದನ್ನು ಮನೆಯಲ್ಲಿಟ್ಟುಕೊಂಡು ಕುಳಿತಿರುತ್ತಾರೆ.

ಇನ್ನು ಬೆಟರ್‌ಮೆಂಟ್ ಲೆವಿ ವಿಧಿಸಿರತಕ್ಕಂಥದ್ದನ್ನು ನೋಡಿದರೆ ಒಂದೊಂದು ಗ್ರಾಮದಲ್ಲಿ ಒಂದೊಂದು ರೀತಿಯಾಗಿರುತ್ತದೆ. ಒಂದು ಗ್ರಾಮದಲ್ಲಿ ಎಕರೆ ಒಂದಕ್ಕೆ ಒಂದು ಸಾವಿರ ರೂಪಾಯಿಗಳನ್ನು ವಿಧಿಸಿದ್ದರೆ ಮತ್ತೊಂದು ಗ್ರಾಮಕ್ಕೆ ಏಳುನೂರು ರೂಪಾಯಿಗಳನ್ನು ವಿಧಿಸಿರು ತ್ತಾರೆ. ಏತಕ್ಕೆ ಈ ರೀತಿಯಾದ ಒಂದು ವ್ಯತ್ಯಾಸವೆಂದು ಕೇಳಿದರೆ ಆಯಾ ಊರಿನ ಜಮೀನು ಮಾರಾ ಟದ ಬೆಲೆಯ ಮೇಲೆ ಈ ರೀತಿಯಾದ ತೆರಿಗೆಯನ್ನು ವಿಧಿಸಲಾಗುತ್ತದೆಂದು ಹೇಳುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಯಾವುದೇ ಒಂದು ಕಾನೂನನ್ನು ಜಾರಿಗೆ ತಂದರೂ ಅದನ್ನು ಸರಿಯಾಗಿ ವಿಚಾ ರಣೆ ಮಾಡಿ ಕಾನೂನುಬದ್ಧವಾಗಿ ಜಾರಿಗೆ ಕೊಡುವುದು ಬಹಳ ಆವಶ್ಯಕ. ಆ ರೀತಿ ಮಾಡದೆ ರೈತರನ್ನು ಹಿಂಸೆಗೆ ಒಳಪಡಿಸುವುದು ನ್ಯಾಯವಾದುದಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೈತ ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗದೆ ಬಹಳ ಕಷ್ಟದಲ್ಲಿರುತ್ತಾನೆ. ಫೇರ್‌ಪ್ರೈಸ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಈಗ ಜೋಳ ಯಥೇಚ್ಛವಾಗಿ ಮಾರ್ಕೆಟ್‌ಗೆ ಹೋಗುತ್ತಾ ಇದೆ ಅದೆಲ್ಲ ಹೋದಮೇಲೆ ವ್ಯವಸ್ಥೆಯನ್ನು ಮಾಡಿದರೆ ಏನೂ ಪ್ರಯೋ ಜನವಾಗುವುದಿಲ್ಲ. ಜೋಳ ಸ್ವಲ್ಪ ಕಪ್ಪಾಗಿರುವುದರಿಂದ ಅದನ್ನು ಕೊಂಡುಕೊಳ್ಳಲು ಯಾರು ಮುಂದೆ ಬರುತ್ತಿಲ್ಲ. ಕರ್ನಾಟಕ ಫುಡ್ ಕಾರ್ಪೊರೇಷನ್‌ನವರು ಕೂಡ ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಈ ರೀತಿಯಾದರೆ ಬೆಳೆದಂಥ ರೈತನೂ ಏನು ಮಾಡಬೇಕು. ಇದಕ್ಕೆ ಏನಾದರೂ ಕ್ರಮ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲವಾದರೆ ಆಹಾರ ಧಾನ್ಯಗಳನ್ನು ತೀರ ಕಡಿಮೆ ಬೆಲೆಗೆ ಮಾರಾಟ ಮಾಡಿ ರೈತನು ಕಷ್ಟಕ್ಕೆ ಒಳಗಾಗುತ್ತಾನೆ. ಇದನ್ನು ನಿಲ್ಲಿಸಿ ಆತನಿಗೆ ಸಹಾಯ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್‌ಬಗ್ಗೆ ಈಗಾಗಲೇ ಅನೇಕ ಮಿತ್ರರು ಹೇಳಿದ್ದಾರೆ. ಈ ಸಂದರ್ಭ ದಲ್ಲಿ ಒಂದು ವಿಚಾರವನ್ನು ಮಾತ್ರ ಹೇಳಲು ಇಚ್ಛೆಪಡುತ್ತೇನೆ. ನಾಲ್ಕು ಲಕ್ಷ ಎಕರೆ ಸರ್ಪ್ಲಸ್ ಲ್ಯಾಂಡ್ ಬರುತ್ತದೆಂದು ಹೇಳಿದ್ದಾರೆ. ಸುಮಾರು ಈ ನಾಲ್ಕು ಲಕ್ಷ ಎಕರೆಗಳಲ್ಲಿ ಹರಿಜನ ಗಿರಿಜನರು ಏನು ಇದ್ದಾರೆ ಅವರಿಗೆ ಏನು ಮಾಡುತ್ತೀರಿ ಎನ್ನುವ ಬಗ್ಗೆ ಉತ್ತರ ಹೇಳುವಾಗ ತಿಳಿಸಬೇಕೆಂದು ಕೇಳುತ್ತೇನೆ.

ಇನ್ನು ಕಲ್ಟಿವೇಟರ್ಸ್ ಅಗ್ರಿಕಲ್ಚರ್ ಲೇಬರರ್ಸ್ ಇವರಿಗೆ ಉದ್ಯೋಗವನ್ನು ಕಲ್ಪಿಸುವ ಸಲು ವಾಗಿ ಏನು ವ್ಯವಸ್ಥೆಯನ್ನು ಮಾಡಿರುತ್ತೀರಿ ಎನ್ನುವ ಬಗ್ಗೆ ಪುನಃ ಪ್ರಸ್ತಾಪ ಮಾಡುತ್ತಾ ಈ ಬಗ್ಗೆ ಏನು ಒಂದು ಯೋಜನೆಯನ್ನು ಮುಂದಿಟ್ಟುಕೊಂಡಿರುತ್ತೀರೆಂದು ಕೇಳುತ್ತೇನೆ.

ಸ್ವಾಮಿ ಏಳು ವರ್ಷಗಳಿಂದಲೂ ರಾಜ್ಯದಲ್ಲಿ ನಿರುದ್ಯೋಗಿ ಸಮಸ್ಯೆ ಏನಾಗಿದೆ ಎಂದರೆ, ಇದು ಮತ್ತಷ್ಟು ಹೆಚ್ಚಿದೆಯೇ ಹೊರತು ಸ್ವಲ್ಪಮಟ್ಟಿಗೂ ಕಡಿಮೆಯಾಗಲೇ ಇಲ್ಲ. ಏಳು ವರ್ಷಗಳಿಂದಲೂ ಕೆಲಸವಿಲ್ಲದವನಿಗೆ ಕೆಲಸ ಎನ್ನುವ ಘೋಷಣೆಯನ್ನು ಮಾಡುತ್ತಿರುವುದು ನಾನು ಕೇಳುತ್ತಲೇ ಇದ್ದೇನೆ. ತಮ್ಮ ಅಂಕಿ ಸಂಖ್ಯೆಗಳ ಪ್ರಕಾರವಾಗಿಯೇ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಬೆಳೆದಿದೆ ಎಂದರೆ, ಇದು ಬೃಹದಾಕಾರವಾಗಿ ಬೆಳೆದಿದೆ. ೧೯೭೧-೭೨ರಲ್ಲಿ ಪೋಸ್ಟ್ ಗ್ರಾಜ್ಯುಯೇಟ್ಸ್ ಸಂಖ್ಯೆ ೬,೦೧೯ ಇದ್ದುದು-೧೯೭೭-೭೮ರಲ್ಲಿ ೧೩,೧೯೦ ಆಗಿರುತ್ತದೆ. ಜನರಲ್-೧೫,೯೯೪. ಇದ್ದುದು ೧೯೭೭-೭೮ರ ಹೊತ್ತಿಗೆ ೫೪,೪೨೧ ಆಯಿತು. ಮೆಟ್ರಿಕ್ಯುಲೇಟ್ ೧೯೭೧-೭೨ರಲ್ಲಿ ೧,೨೩,೯೪ ಇದ್ದುದು ೧೯೭೭-೭೮ರಲ್ಲಿ ಇದು ೨,೩೧,೪೨೮ಕ್ಕೆ ಏರಿರುತ್ತದೆ. ಡಿಪ್ಲೊಮೋ ಹೋಲ್ಡರ್ಸ್ ೧೯೭೧-೭೨ರಲ್ಲಿ ೫,೦೫೪ ಇದ್ದುದು ೧೯೭೭-೭೮ಕ್ಕೆ ೬,೦೫೪ ಆಯಿತು. ಐಟಿಐ ಸರ್ಟಿಫಿಕೇಟ್ ಹೋಲ್ಡರ್ಸ್ ೧೯೭೧-೭೨ರಲ್ಲಿ ೩,೭೩೪ ಇದ್ದುದು ೧೯೭೭-೭೮ಕ್ಕೆ ೧೭,೩೫೪ ಆಯಿತು. ಇನ್ನು ವ್ಯವಸಾಯ ಏನು ಇಲ್ಲದೆ ಇರತಕ್ಕಂಥವರ ಸಂಖ್ಯೆ ೪೦ ಲಕ್ಷಕ್ಕೂ ಜಾಸ್ತಿ ಇರುತ್ತದೆ. ಇದಿಷ್ಟು ತಿಳಿದಿರುವ ಸಂಖ್ಯೆ ತಿಳಿಯದೆ ಇರುವ ಅನೇಕ ಜನ ನಿರುದ್ಯೋಗಿಗಳು, ಕೆಲಸವಿಲ್ಲದೆ ಇರತಕ್ಕಂಥ ಸಂಖ್ಯೆ ಬೇಕಾದಷ್ಟು ಇರುತ್ತದೆ. ಸರ್ಕಾರದವರು ಉದ್ಯೋಗವಿಲ್ಲದವರಿಗೆ ಉದ್ಯೋಗವನ್ನು ಕಲ್ಪಿಸುವುದರತ್ತ ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಎಂದು ಕೇಳುತ್ತೇನೆ. ವಿದ್ಯಾವಂಥ ತರುಣರು ಹಳ್ಳಿಗಳಲ್ಲಿ ಲಕ್ಷಾಂತರ ಜನರು ಇರುತ್ತಾರೆ. ಅವರೆಲ್ಲರೂ ಬೇರೆ, 'ಅವರ ಸಮಸ್ಯೆಯೇ ಬೇರೆಯದಾಗಿರುತ್ತದೆ. ಅವರಿಗೆ ಕೆಲಸ' ಕೊಡತಕ್ಕಂಥ ಏನಾದರೂ ಒಂದು ಯೋಜನೆಯನ್ನು ಮಾಡಿದ್ದೀರಾ, ಮುಂದೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಇವರಿಗೆ ಕೆಲಸ ಕೊಡತಕ್ಕ ಯೋಜನೆಯನ್ನು ಏನು ಮಾಡುತ್ತಿದ್ದೀರಿ?

ಶ್ರೀ ಡಿ. ದೇವರಾಜ ಅರಸ್ :—ನಿಮಗೇನಾದರು ಗೊತ್ತಿದ್ದರೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ :—ನಾನು ಮಂತ್ರಿಯಾಗಿಲ್ಲ ಮಂತ್ರಿಯಾಗಿದ್ದರೆ ಅದನ್ನು ನಾನು ಹೇಳಬಹುದಾಗಿತ್ತು. ನನ್ನ ದುರ್ಭೈವವೋ ಸುಧೈವವೋ ಏನೋ ನನಗೆ ಆ ಅವಕಾಶ ಸಿಕ್ಕಿಲ್ಲ. ಆದರೂ ನಾನು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್ :—ನಿಮಗೆ ಗೊತ್ತಿರುವುದನ್ನು ನಮಗಾದರೂ ಹೇಳಿ.

ಶ್ರೀ ಎಸ್. ಆರ್ ಬೊಮ್ಮಾಯಿ :—ನಾನು ಭಾಷಣದ ಪ್ರಥಮದಲ್ಲಿಯೇ ಹೇಳಿದ್ದೇನೆ. ನಾನು ರಾಜಕೀಯವಾಗಿ ಈ ಬಜೆಟ್ಟಿನ ಮೇಲೆ ಮಾತನಾಡುತ್ತಿಲ್ಲ ಎಂದು, ನಾನು ವ್ಯವಸಾಯದ ಬಗೆ ಪರ್ಯಾಯ ವ್ಯವಸ್ಥೆ (ಆಲ್ಟರ್ನೇಟಿವ್) ಏನು ಮಾಡಬೇಕು ಎಂಬುದನ್ನು ಹೇಳಿದ್ದೇನೆ. ಅದೇ ರೀತಿ ಈ ನಿರುದ್ಯೋಗ ಸಮಸ್ಯೆಯ ಬಗ್ಗೆಯೂ ನಾನು ಹೇಳುತ್ತಿದ್ದೇನೆ, ನಾನು ಹೇಳಲೇಬೇಕಾಗಿದೆ. ಈಗಾಗಲೇ ಕೇಂದ್ರ ಸರ್ಕಾರ ಈ ಬಗ್ಗೆ ಆಲೋಚನೆ ಮಾಡಿದೆ. ಯೋಜನೆಗಳನ್ನು ಹಾಕಿಕೊಂಡಿದೆ. ಡೀಸೆಂಟ್ರಲೈಸೇಷನ್ ಅಫ್ ಇಂಡಸ್ಟ್ರೀಸ್, ರೂರಲ್ ಬೇಸ್ಡ್ ಇಂಡಸ್ಟ್ರೀಸ್ ಮುಂತಾದ ಯೋಜನೆಗಳೇನಿವೆ .....

ಶ್ರೀ ಡಿ. ದೇವರಾಜ ಅರಸ್ :—ಎಲ್ಲಾ ಮಾಡೋಣ.

ಶ್ರೀ ಎಸ್ ಆರ್. ಬೊಮ್ಮಾಯಿ :—ಅದನ್ನೇ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಇದಲ್ಲದೆ ಈಗ ಡಿಸ್ಟ್ರಿಕ್ ಇಂಡಸ್ಟ್ರಿಯಲ್ ಸೆಂಟರ್ಸ್ ಬಂದಿದೆ. ಇದು ಕೇಂದ್ರ ಸರ್ಕಾರದ ಯೋಜನೆ ಪ್ರಕಾರ ಬಂದಿದೆ. ಆದರೆ ಈ ಯೋಜನೆಯು ಕೆಲಸ ಯಾವ ರೀತಿ ಆಗುತ್ತಿದೆ ಎಂಬುದನ್ನು ನೋಡಿದ್ದೀರಾ? ನಾನು ಧಾರವಾಡ ಜಿಲ್ಲೆಯ ಬಗ್ಗೆ ಹೇಳುವುದಾದರೆ ಇದಕ್ಕೆ ಸಂಬಂಧಪಟ್ಟವರ ಮುಖವನ್ನು ಸಹ ನಾನು ಇದುವರೆಗೆ ನೋಡಿಲ್ಲ. ಕಚೇರಿಗೆ ಫೋನ್ ಮಾಡಿದರೆ ಅವರು ಎಲ್ಲೋ ಹೊರಗಡೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಹೀಗಾದರೆ ಇವರು ಯಾವ ಯೋಜನೆಯನ್ನು ಕಾರ್ಯಗತ ಮಾಡುತ್ತಾರೆ? ಅಲ್ಲಿಗೆ ಅಧಿಕಾರಿಗಳನ್ನು ಬಡ್ತಿ ಕೊಟ್ಟು ಕೂರಿಸಿದ್ದೀರಿ. ನಾನು ಬೇಡ ಎಂದು ಹೇಳುವುದಿಲ್ಲ; ನನಗೆ ಯಾವ ಅಧಿಕಾರಿಗಳನ್ನು ಹಾಕಿದರೂ ಚಿಂತೆಯಿಲ್ಲ, ಇಂಥವರನ್ನೇ ಹಾಕಬೇಕು ಎಂದೇನೂ ಇಲ್ಲ, ಆದರೆ ಸರಿಯಾಗಿ ಕೆಲಸ ಮಾಡುವವರಾಗಬೇಕು ಅಷ್ಟೆ. ಡಿಸ್ಟ್ರಿಕ್ ಇಂಡಸ್ಟ್ರಿಯಲ್ ಸೆಂಟರ್ಸ್ ಯೋಜನೆ ಬಂದಮೇಲೆ ಯಾವರೀತಿಯಾಗಿ ರಾಜ್ಯದಲ್ಲಿ ಕೆಲಸವಾಗಿದೆ. ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೋಡಬೇಕು. ನಿರುದ್ಯೋಗ ಸಮಸ್ಯೆ ಬಿಡಿಸುವುದಕ್ಕೆ ಕೇಂದ್ರ ಸರ್ಕಾರದವರು ಕೆಲವು ಉದ್ಯಮಗಳನ್ನು ಏನು,

ಮಾಡಬೇಕೆಂದು ಹೇಳಿದ್ದಾರೋ ಅದನ್ನು ತಕ್ಷಣ ಕಾರ್ಯಗತ ಮಾಡಬೇಕು. ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ರೂರಲ್ ಬೇಸ್ಡ್ ಇಂಡಸ್ಟ್ರೀಸ್, ಮತ್ತು ಡಿಸ್ಟ್ರಿಕ್ ಇಂಡಸ್ಟ್ರೀಯಲ್ ಸೆಂಟರ್ಸ್ ಈ ಯೋಜನೆಗಳನ್ನ ತೀವ್ರವಾಗಿ ಕಾರ್ಯಗತ ಮಾಡದೇಹೋದರೆ ನಿರುದ್ಯೋಗ ಸಮಸ್ಯೆಯನ್ನು ಖಂಡಿತ ಬಿಡಿಸುವುದಕ್ಕಾಗು ವುದಿಲ್ಲ. ಹಣ ಮಾತ್ರ ಖರ್ಚಾಗುತ್ತಿದೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ಖರ್ಚಾಗತಕ್ಕ ಹಣ ಸರಿಯಾದ ರೀತಿಯಲ್ಲಿ ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹಣ ಮಾತ್ರ ಖರ್ಚಾಗುತ್ತದೆ ಯೋಜನೆಯ ಪ್ರಯೋಜನ ಮಾತ್ರ ಸ್ವಲ್ಪವು ಅಗುವುದಿಲ್ಲ. ಹೀಗಾಗಿ ಅನೇಕ ಅಭಿ ವೃದ್ಧಿ ಕಾರ್ಯಗಳು ಯಾವ ಗುರಿಯನ್ನು ಮುಟ್ಟಬೇಕಾಗಿತ್ತೋ ಆ ಗುರಿಯನ್ನು ಮುಟ್ಟುತ್ತಿಲ್ಲ. ಅದ ರಿಂದ ಸರ್ಕಾರದವರು ಈ ಬಗ್ಗೆ ಹೆಚ್ಚು ಗಮನ ಹರಿಸಿ ಈ ಕೆಲಸಗಳು ಚುರುಕಾಗಿ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಆದರೆ ನಮ್ಮಲ್ಲಿ ಆ ಕೆಲಸ ಮಾತ್ರ ಆಗಿಲ್ಲ ಎಂಬ ಮಾತನ್ನು ತಮಗೆ ಹೇಳ ಬಯಸುತ್ತಿದ್ದೇನೆ. ನಿರುದ್ಯೋಗ ಸಮಸ್ಯೆ ಇಷ್ಟು ಬೃಹದಾಕಾರವಾಗಿ ಬೆಳೆಯುತ್ತಿದ್ದರು ಕೂಡ ಅದನ್ನು ಪರಿಹರಿಸಲು ನಮ್ಮ ರಾಜ್ಯ ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ಹಾಕಿಕೊಟ್ಟಂಥ ದಾರಿಯಲ್ಲಾದರು ಹೋಗಿ ಆ ಕಾರ್ಯಕ್ರಮಗಳನ್ನಾದರೂ ಜಾರಿಗೆತರೋಣ. ಅವರ ಕಾರ್ಯಕ್ರಮಗಳನ್ನು ಆಚರಣೆಗೆ ತರಲು ಪ್ರಯತ್ನ ಮಾಡೋಣ ಎಂಬ ಮಾತನ್ನು ಹೇಳಬಯಸು ತ್ತಿದ್ದೇನೆ. ರೂರಲ್ ಓರಿಯೆಂಟೆಡ್ ಸ್ಕೀಂ ನಮ್ಮಲ್ಲಿ ಬರಬೇಕು. ಈ ನೀತಿಯನ್ನು ಆಚರಣೆಗೆ ತಂದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಕ್ಕೆ ಎಷ್ಟೋ ಸಹಕಾರಿಯಾಗುತ್ತದೆ ಈ ವಿಷಯದಲ್ಲಿ ವಿವರ ವಾದ ಯೋಜನೆಗಳನ್ನು ಕೊಡತಕ್ಕ ಅವಕಾಶ ನಮಗಿಲ್ಲ. ಇವತ್ತು ಸರ್ಕಾರದವರು ಆ ಬಗ್ಗೆ ಆಲೋ ಚನೆ ಮಾಡಬೇಕು. ಕೇಂದ್ರದ ಯೋಜನೆಗಳ ಜೊತೆಗೆ ರಾಜ್ಯ ಸರ್ಕಾರದ ಯೋಜನೆಗಳನ್ನು ಸೇರಿಸಿ ಈ ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡಬೇಕು. ಇಲ್ಲದಿದ್ದರೆ ಈ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿ ಇವರು ಕೆಲವೇ ದಿವಸಗಳಲ್ಲಿ ಸಮಾಜಕ್ಕೆ ಒಂದು ದೊಡ್ಡ ಹೊರೆ ಯಾಗುತ್ತಾರೆ. ಅವರ ಬುದ್ಧಿ ಡೆವಿಲ್ಸ್ ವರ್ಕ್‌ಷಾಪ್ ಆದ ಹಾಗಾಗುತ್ತದೆ. ಈಗಾಗಲೇ ವಿದ್ಯಾವಂತ ನಿರುದ್ಯೋಗಿಗಳು. ಪೋಸ್ಟ್ ಗ್ರಾಜುಯೇಟ್ಸ್ ಮಾತನಾಡುವ ದಾಟಿಯನ್ನು ನೋಡಿದಾಗ, ಅವರ ಸ್ಥಿತಿಯನ್ನು ಕೇಳಿದಾಗ ಮನಸ್ಸಿಗೆ ವೇದನೆಯಾಗುತ್ತದೆ. ಆ ನಿರುದ್ಯೋಗಿ ಯುವಕರು ಮುಂದಿನ ಭವಿಷ್ಯ ಗೊತ್ತಿಲ್ಲದೆ ಹುಚ್ಚರಾಗಿ ತಿರುಗುತ್ತಿದ್ದಾರೆ. ಅಂಥವರಿಗೆ ಸರಿಯಾದ ಒಂದು ದಿಕ್ಕನ್ನು ತೋರಿಸ ತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಈ ಸರ್ಕಾರ ಏನು ಕಾರ್ಯಕ್ರಮ ತೆಗೆದು ಕೊಂಡಿದೆ ಎಂಬ ಮಾತನ್ನು ಕೇಳಬಯಸುತ್ತಿದ್ದೇನೆ. ಮಾನ್ಯ ಹಣಕಾಸಿನ ಮಂತ್ರಿಗಳ ೫೮ ಪುಟಗಳ ಭಾಷಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಜಿಲ್ಲಾ ಉದ್ಯೋಗ ಕೇಂದ್ರಗಳ ಬಗ್ಗೆ ಒಂದು ಶಬ್ದವನ್ನೂ ಹೇಳಿಲ್ಲ. ಕೇಂದ್ರ ಸರ್ಕಾರದ ಯೋಜನೆ ಈ ರೀತಿ ಇದೆ, ನಮ್ಮ ಯೋಜನೆ ಈ ರೀತಿ ಇದೆ, ಈ ಪ್ರಕಾರ ನಾವು ಕೆಲಸ ಮಾಡುತ್ತಿದ್ದೇವೆ ಎಂಬ ಬಗ್ಗೆ ಒಂದು ಮಾತೂ ಹೇಳಿಲ್ಲ. ಚುನಾವಣೆಗಿಂತ ಮೊದಲು ನಿರುದ್ಯೋಗಿಗಳಿಗೆ ಸ್ಟೈಫಂಡ್ ಕೊಟ್ಟಿದ್ದೀರಿ ನಿಜ. ಅದು ಒಳ್ಳೆಯದು ಅದನ್ನು ಯಾರೂ ಬೇಡ ಎಂದು ಹೇಳುವುದಿಲ್ಲ. ಆದರೆ ಅಷ್ಟೇ ಕೊಟ್ಟರೆ ಸಾಲದು; ಅದರಿಂದ ಪ್ರಯೋಜನವೇನೂ ಹೆಚ್ಚಾಗಿ ಆಗುವುದಿಲ್ಲ. ಅವರಿಗೆ ಖಾಯಂ ಆದ ಉದ್ಯೋಗವನ್ನು ಕೊಡಬೇಕು. ಏನು ಗತಿ ಇಲ್ಲ ದಿದ್ದಾಗ ೧೫೦ ರೂಪಾಯಿಗಳನ್ನು ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ ನಿಜ, ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ, ಆದರೆ ಮುಂದೆ ಇವರ ಭವಿಷ್ಯ ಏನು ಎಂಬುದನ್ನು ಯೋಚನೆ ಮಾಡ ಬೇಕಾಗುತ್ತದೆ. ಈಗ ಅವರ ಗತಿ ಏನಾಗಿದೆ? ಚುನಾವಣೆ ಮುಗಿಯಿತು, ೬ ತಿಂಗಳಾಯಿತು, ಸ್ಟೈಫಂಡ್ ಮುಗಿಯಿತು. ಈಗ ಅವರ ಗತಿ ಏನಾಗಿದೆ? ಈಗ ಅವರೆಲ್ಲಾ ನಮ್ಮ ಮನೆ ಬಾಗಿಲಿಗೆ ಬರು ತ್ತಿದ್ದಾರೆ. ನೂರಾರು ಜನ ಯುವಕರು ನಮ್ಮ ಬಾಗಿಲಿಗೆ ಬಂದು ಮುಖ್ಯ ಮಂತ್ರಿಗಳಿಗೆ ಹೇಳಿ ನಮಗೆ ಕೆಲಸ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಇಲ್ಲಪ್ಪಾ ಅದು ಸ್ಟೈಫಂಡ್ ತಾತ್ಕಾಲಿಕವಾಗಿ ಕೊಡುತ್ತಿ ದ್ದುದು, ಅದು ತಾತ್ಕಾಲಿಕ ಪರಿಹಾರ ಅಷ್ಟೇ ಎಂದು ಹೇಳಿದರೂ ಕೂಡಾ ಏನಾದರೂ ಮಾಡಿ ನಮಗೆ ಕೆಲಸ ಕೊಡಿಸಿಕೊಡಿ ಎಂದು ಹೇಳುತ್ತಿದ್ದಾರೆ. ನನ್ನ ಹತ್ತಿರ ನೂರಾರು ಅರ್ಜಿಗಳು ಬಂದಿವೆ. ಹೀಗೆ ಅವರಿಗೆ ಹಂಗಾಮಿ ಕೆಲಸ ಕೊಟ್ಟು ಹಂಗಾಮಿ ಉಪಯೋಗವನ್ನು ಅವರಿಂದ ತೆಗೆದುಕೊಂಡು ಈಗ ಕೈಬಿಟ್ಟರೆ ಆ ಯುವಕರ ಗತಿ ಏನು? ಅವರಿಗೆ ದಾರಿ ತೋರಿಸುವವರು ಯಾರು? ಅವರು ರೆಗ್ಯುಲರ್ ರಿಕ್ರೂಟ್‌ಮೆಂಟಿನಲ್ಲಿ ಬರುವುದಿಲ್ಲ, ದಿನಗೂಲಿ ಮೇಲೆ ಕೆಲಸ ಮಾಡಿ ಈಗ ಅವರು ತೊಂದರೆಗೆ ಈಡಾಗಿ ದ್ದಾರೆ. ಈ ರೀತಿಯ ತಾತ್ಕಾಲಿಕ ಯೋಜನೆಗಳಿಗಿಂತ ಖಾಯಂ ಆದ ನಿರಂತರವಾಗಿ ನಿರುದ್ಯೋಗ ಸಮಸ್ಯೆಯನ್ನು ಬಿಡಿಸತಕ್ಕ ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಈ ಕೆಲಸ ಒಂದೇ

ದಿವಸದಲ್ಲಿ ಆಗುವುದಿಲ್ಲ; ಹಂತ ಹಂತವಾಗಿ ಇದನ್ನು ಮಾಡಬೇಕಾಗುತ್ತದೆ. ಇಂಥ ಯೋಜನೆಗಳನ್ನು ತಾವು ಹಾಕಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ರೈತರ ಉದ್ಧಾರವಾಗಬೇಕಾದರೆ ಒಕ್ಕಲುತನದಲ್ಲಿ ನವೀಕರಣವಾಗಿ ಕ್ರಾಂತಿಕಾರಕವಾದ ಬದಲಾವಣೆ ಯಾವರೀತಿ ಆಗಬೇಕೆಂದು ಹೇಳುತ್ತೇವೆಯೋ ಅದರಂತೆ ಔದ್ಯೋಗಿಕ ಕೇಂದ್ರದಲ್ಲಿ ಕೂಡ ಇವತ್ತು ಕ್ರಾಂತಿಕಾರಕವಾದ ಬದಲಾವಣೆಯಾಗಬೇಕು. ಎಂಪ್ಲಾಯ್ಮೆಂಟ್ ಓರಿಯಂಟೆಡ್ ಅಗ್ರೋ ಬೇಸ್ಡ್ ಇಂಡಸ್ಟ್ರೀಸ್ ಮಾಡತಕ್ಕ ವ್ಯವಸ್ಥೆ ಬಗ್ಗೆ ತಮ್ಮ ಭಾಷಣದಲ್ಲಿ ಎಲ್ಲೂ ಹೇಳಿಲ್ಲ. ಇಂಥ ಉದ್ದವಾದ ಆಯವ್ಯಯ ಭಾಷಣದಲ್ಲಿ ಈ ಬಗ್ಗೆ ಒಂದು ಮಾತನ್ನೂ ಹೇಳದಿರುವುದರಿಂದ ನಿಜವಾಗಿಯೂ ಮನಸ್ಸಿಗೆ ತುಂಬಾ ವೇದನೆಯಾಗುತ್ತಿದೆ. ಸರ್ಕಾರಕ್ಕೆ ಈ ಬಗ್ಗೆ ಏನೂ ಆಲೋಚನೆ ಇಲ್ಲವೇ ಎಂದು ಕೇಳಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ಆಯವ್ಯಯ ಭಾಷಣದಲ್ಲಿ ಹೇಳಬೇಕಾಗಿತ್ತು, ಸರ್ಕಾರ ಆಲೋಚನೆ ಮಾಡಬೇಕಾಗಿತ್ತು. ಏಕೆಂದರೆ ಇದೆಲ್ಲಾ ಆಡಳಿತ ಪಕ್ಷದ ಘೋಷಣೆಯಾಗಿತ್ತು. ಅವರ ಪಕ್ಷದ ಘೋಷಣೆಯನ್ನು ಕೈಗೂಡಿಸುವುದಕ್ಕೆ ಕೊಂಚವಾದರೂ ಪ್ರಯತ್ನಪಡಬೇಕಾಗಿತ್ತು. ತಾವು ಮಾಡುತ್ತಿರುವುದನ್ನು ನೋಡಿದಾಗ ಕನ್ನಡಿಯಲ್ಲಿ ಗಂಟು ತೋರಿಸಿ ಜನರಿಗೆ ಮಂಕು ಹಿಡಿಯುವಂತೆ ಮಾಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಈಗಲಾದರೂ ಸರ್ಕಾರದವರು ಆಲೋಚನೆ ಮಾಡಿ ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಿ ಎಂದು ಹೇಳಬಯಸುತ್ತೇನೆ. ಇನ್ನು ಪೀಪಲ್ಸ್ ಹೌಸಿಂಗ್ ಸ್ಕೀಂ ಬಗ್ಗೆ ಹೇಳುವುದಾದರೆ ಇದು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಪ್ರಿಯವಾದ, ಹೃದಯಕ್ಕೆ ಸಮೀಪವಾದಂಥ ಒಂದು ಯೋಜನೆ, ಅವರಿಗೆ ಇದು ಒಂದು ಹೆಮ್ಮೆಯ ಯೋಜನೆ. ಅಷ್ಟೊಂದು ಪ್ರೀತಿ ಅವರಿಗೆ ಈ ಯೋಜನೆಯ ಬಗ್ಗೆ ಇದೆ. ಏಕೆಂದರೆ ಅವರು ಈ ಯೋಜನೆಯನ್ನು ಜಾರಿಗೆ ತಂದು ರಾಜ್ಯದಲ್ಲೇ ಅಲ್ಲ ರಾಷ್ಟ್ರದಲ್ಲೂ ಕೂಡ ಒಂದು ಕುತೂಹಲವನ್ನು ಕೆರಳಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಏನು ಗತಿ ಇಲ್ಲದಂಥ ಬಡವನಿಗೆ ಎಂಥದ್ದೇ ಆಗಲೀ ಸ್ವಲ್ಪ ನೆರಳು ಕೊಟ್ಟರೆ, ಇಷ್ಟಾದರೂ ಸಿಕ್ಕಿತಲ್ಲಾ ಎಂದು ಅವನು ಸಂತೋಷಪಡುತ್ತಾನೆ, ಇಂಥ ಒಂದು ವಾತಾವರಣ ನಿರ್ಮಾಣವಾಗಿದೆ. ಮನೆಗಳ ಬಗ್ಗೆ ಯಾವ ರೀತಿ ಕಟ್ಟಿಧ್ಧಾರೆ, ಮತ್ತು ಅವುಗಳು ಯಾವ ಸ್ಥಿತಿಯಲ್ಲಿವೆ ಎಂಬುದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ, ಬಡವರಿಗೆ ಮನೆ ಕಟ್ಟಿಕೊಡತಕ್ಕಂಥ ಕೆಲಸ ಬಹಳ ಉತ್ತಮವಾದ ಯೋಜನೆ, ಬಹಳ ಆದರ್ಶವಾದ ಯೋಜನೆ, ಈ ಕಾರ್ಯಕ್ರಮದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅದಕ್ಕೆ ನಾವುಗಳೆಲ್ಲರೂ ಇದುವರೆಗೊ ಬೆಂಬಲ ಕೊಟ್ಟುಕೊಂಡು ಬಂದಿದ್ದೇವೆ ಇನ್ನೂ ಮುಂದೆಯೂ ಅದೇ ರೀತಿಯ ಸಹಕಾರವನ್ನು ಕೊಡುತ್ತೇವೆ. ಆದರೆ ಆ ಯೋಜನೆ ಹೇಳಿಕೊಳ್ಳುವ ರೀತಿಯಲ್ಲಿ ನಡೆಯುತ್ತಿಲ್ಲ. ಅನೇಕ ಕಡೆ ಮನೆಗಳನ್ನು ಕಟ್ಟಿದ್ದಾರೆ. ಪ್ರತಿಯೊಬ್ಬರಿಗೂ ಮನೆ ಬೇಕು. ಆದರೆ ಯಾರಿಗೆ ಆ ಮನೆಯನ್ನು ಕೊಟ್ಟಿದ್ದೇವೆಯೋ ಆತನು ಕೊನೆಯ ಪಕ್ಷ ೧೦–೧೫ ವರ್ಷಗಳವರೆಗಾದರೂ ಆ ಮನೆಯಲ್ಲಿ ವಾಸಮಾಡುವುದಕ್ಕೆ ಅನುಕೂಲವಾಗಿರತಕ್ಕಂಥ ಗಟ್ಟಿ–ಮುಟ್ಟಾಗಿರತಕ್ಕಂಥ ಮನೆಗಳು ಬೇಕು. ಕೆಲವು ಕಡೆ ಮನೆಗಳು ಬಿದ್ದು ಹೋಗಿವೆ ಹೆಂಚುಗಳು ಹೊಡೆದು ಹೋಗಿವೆ, ಬಾಗಿಲು ಹಾಳಾಗಿವೆ. ಆ ಬಡವನು ಪುನಃ ರಿಪೇರಿ ಮಾಡತಕ್ಕಂಥ ಶಕ್ತಿ ಆತನಲ್ಲಿ ಇಲ್ಲ. ಇದನ್ನು ನಾನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿ ಮೀಟೀಂಗ್‌ನಲ್ಲಿ ಚರ್ಚೆ ಮಾಡಿದ್ದೇನೆ. ಬಿ.ಡಿ.ಓ. ರವರನ್ನು ಕೇಳಿದರೆ ನಮ್ಮಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ, ಅನಂತರ ಸ್ವಲ್ಪ ಹಣ ಕೊಟ್ಟಿದ್ಧಾರೆಂದು ತಿಳಿಯಿತು. ನಾನು ತಮಿಳುನಾಡಿನಲ್ಲಿ ನೋಡಿದ್ದೇನೆ. ಅಲ್ಲಿ ಅವರು ಪೀಪಲ್ಸ್ ಹೌಸಿಂಗ್ ಸ್ಕೀಂನಲ್ಲಿ ಹಾಗೂ ಸ್ಲಂ ಕ್ಲಿಯರೆನ್ಸ್ ಯೋಜನೆಯಲ್ಲಿ ಬಹಳ ಚೆನ್ನಾಗಿ ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿ ಆ ಮನೆಗಳು ಸುಮಾರು ಕೊನೆಯ ಪಕ್ಷ ೨೦ ವರ್ಷಗಳವರೆಗಾದರು ಬಾಳಿಕೆ ಬರತಕ್ಕಂಥ ಮನೆಗಳನ್ನು ಕಟ್ಟಿದ್ದಾರೆ ಕೆಲವು ಕಡೆ ಮಲ್ಟಿಸ್ಟೋರೈಡ್ ಕಟ್ಟಡಗಳನ್ನೂ ಕೂಡ ಕಟ್ಟಿದ್ಧಾರೆ. ಇನ್ನು ಮುಂದಾದರೂ ಕೊನೆಯ ಪಕ್ಷ ೧೦–೧೫ ವರ್ಷಗಳವರೆಗಾದರೂ ಗಟ್ಟಿಮುಟ್ಟಾಗಿರತಕ್ಕಂಥ ಮನೆಗಳನ್ನು ಕಟ್ಟೋಣ.

೫–೩೦ ಪಿ.ಎಂ.

ಅದೇ ರೀತಿಯಲ್ಲಿ ಮನೆ ನಿವೇಶನ ಹಂಚಿಕೆಯ ವಿಚಾರದಲ್ಲಿ ಹೇಳುವುದಾದರೆ. ನಾನು ಅನೇಕ ಕಡೆ ನೋಡಿದ್ದೇನೆ. ಊರು ಬಿಟ್ಟು ಒಂದು ಗಾವುದ ದೂರದಲ್ಲಿ ಸೈಟುಗಳನ್ನು ಕೊಟ್ಟಿದ್ದಿರಿ ಅಲ್ಲಿ ನೀರು ಇಲ್ಲ, ದೀಪ ಇಲ್ಲ. ಅಲ್ಲಿ ಜನರು ಹೇಗೆ ವಾಸ ಮಾಡಬೇಕು? ಅಷ್ಟು ದೂರದಲ್ಲಿ ಜಾಗವನ್ನು ತೋರಿಸುವುದಕ್ಕೂ ಒಂದು ಕಾರಣ ಉಂಟು. ಊರಿನ ಪಕ್ಕದಲ್ಲಿರುವ ಜಮೀನು ಸ್ವಾಧೀನ ಮಾಡಿಕೊಳ್ಳಬೇಕಾದರೆ ಆ ಜಮೀನಿನ ಒಡೆಯ ರಾಜಕೀಯ ಪುಡಾರಿಯಾಗಿರುತ್ತಾನೆ, ಅಥವಾ ಆತನು ಶ್ರೀಮಂತನಾಗಿರು

ತ್ತಾನೆ ಆತನ ಜಮೀನನ್ನು ಸ್ವಾಧೀನ ಮಾಡಿಕೊಳ್ಳದೇ ಊರಿನಿಂದ ಬಹಳ ದೂರದಲ್ಲಿ ಸೈಟುಗಳನ್ನು ಕೊಟ್ಟು, ಅಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರೆ ಏನು ಪ್ರಯೋಜನ ? ಅದರಿಂದ ಈ ಯೋಜನೆಯು ಕಾರ್ಯಾಚರಣೆಯಲ್ಲಿ ಅನೇಕ ನ್ಯೂನತೆಗಳಿವೆ. ಮತ್ತೆ ಮನೆಗಳನ್ನು ಕಟ್ಟತಕ್ಕಂಥಾ ಕಂಟ್ರಾಕ್ಟ್ದಾರರು ಹಾಗೂ ಅಲ್ಲಿರುವ ಅಧಿಕಾರಿಗಳು ಇದನ್ನು ಸರಿಯಾದ ರೀತಿಯಲ್ಲಿ ಆಚರಣೆಯಲ್ಲಿ ತಂದಿಲ್ಲ. ಕಳೆದ ೪-೫ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥಾದ್ದರಲ್ಲಿ ಆಗಿರುವ ಕುಂದು ಕೊರತೆಗಳನ್ನು ನಿವಾರಣೆ ಮಾಡತಕ್ಕಂಥ ವ್ಯವಸ್ಥೆ ಕೂಡಲೇ ಆಗಬೇಕು, ಇಲ್ಲದಿದ್ದರೆ ತಾವು ಈ ವರ್ಷ ಒಂದು ಲಕ್ಷ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಏನು ಆಲೋಚನೆ ಮಾಡಿದ್ದೀರಿ, ಅದು ನಿಜವಾಗಿಯೂ ಪ್ರಯೋಜನಕಾರಿಯಾಗಿ ನಡೆಯುವುದಿಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬಿನ್ನಹ ಮಾಡಿಕೊಳ್ಳುವುದೇನೆಂದರೆ, Let there be a committee of this House to inspect the built houses. ಕಟ್ಟಿದ ಮನೆಗಳನ್ನು ಸರ್ವೆ ಮಾಡಿ, ಅವುಗಳನ್ನು ನೋಡಿಕೊಂಡು ಬರಲಿ, ಎಲ್ಲೆಲ್ಲಿ ಅನಾಹುತವಾಗಿದೆ, ಏನು ವ್ಯವಸ್ಥೆ ಮಾಡಬೇಕಾಗಿದೆ ಎಂಬುದನ್ನು ತಿಳಿಯಲು ಕೆಲವು ಕಡೆ ಹೋಗಿ ನೋಡಿಕೊಂಡು ಬರೋಣ. ಯಾವ ಸ್ಥಿತಿಯಲ್ಲಿ ಮನೆಗಳು ಇವೆ, ನಿಜವಾಗಿ ಜನಗಳು ಆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆಯೋ ? ಎಂಬುದಾಗಿ ತಿಳಿದುಕೊಳ್ಳೋಣ. ಮತ್ತೆ ನಿಜವಾಗಿಯೂ ಯಾವ ಹರಿಜನ—ಗಿರಿಜನರಿಗೆ ಮನೆಗಳು ಸಿಕ್ಕಬೇಕೋ ಅವರಿಗೆ ಸಿಕ್ಕಿಲ್ಲ. ಪೀಪಲ್ ಹೌಸಿಂಗ್ ಸ್ಕೀಂ ಪ್ರಾರಂಭವಾದಾಗಿನಿಂದ ಅಂದರೆ ೧೯೭೩—೭೪ನೇ ಇಸವಿಯಿಂದ ಇಲ್ಲಿಯವರೆಗೂ ೨೪,೬೫೫ ಮನೆಗಳನ್ನು ಕಟ್ಟಿದ್ದಾರೆ. ಅದಕ್ಕೆ ಖರ್ಚು ಮಾಡಿದ ಹಣ ಅಂದರೆ ಕಳೆದ ೫ ವರ್ಷಗಳಲ್ಲಿ ೨೧.೧೫ ಕೋಟಿ ರೂಪಾಯಿಗಳು. ಆದರೆ ಈ ವರ್ಷದಲ್ಲಿ ೨೦ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಬೇಕೆಂದಿದ್ದೀರಿ. ಅದರಲ್ಲಿ ಜನತಾ ಗೃಹನಿರ್ಮಾಣ ಯೋಜನೆಗೆ ನಿಗದಿಪಡಿಸಿರುವ ಹಣವೆಷ್ಟು ? ಹುಡ್ಕೋ ಯೋಜನೆಗೆ ನಿಗದಿಪಡಿಸಿರುವ ಹಣವೆಷ್ಟು ? ಎಂಬುದನ್ನು ವಿವರವನ್ನು ಹೇಳಬೇಕು. ೨೦ ಕೋಟಿ ರೂಪಾಯಿಗಳಲ್ಲಿ ಹುಡ್ಕೋ ಸ್ಕೀಂನ ಕೆಳಗೆ ಬಂದಂತಹ ಹಣ ೧೦ ಕೋಟಿ ಇರಬೇಕು. ೨೧-೧೫ ಕೋಟಿ ರೂಪಾಯಿಗಳನ್ನು ಕಳೆದ ೫ ವರ್ಷಗಳಲ್ಲಿ ಖರ್ಚು ಮಾಡಿದ್ದೀರಿ. ಆದರೆ ಈ ವರ್ಷ ಒಂದರಲ್ಲೇ ೨೦ ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಖರ್ಚು ಮಾಡಬೇಕೆಂದಿರುವಾಗ, ಕೇಂದ್ರಸರ್ಕಾರದಿಂದ ಬಂದಂತಹ ಹಣ ಎಷ್ಟು ? ೧೦ ಕೋಟಿ ರೂಪಾಯಿಗಳು ಹುಡ್ಕೋ ಯೋಜನೆಗೆ ಬಿಟ್ಟರೆ ಉಳಿದ ಅನೇಕ ಯೋಜನೆಗಳಿಗೆ ಕೇಂದ್ರದಿಂದ ಹಣ ಬಂದಿದೆ. ಅದನ್ನು ತಮ್ಮ ಭಾಷಣದಲ್ಲಿ ಎಲ್ಲೂ ನಮೂದು ಮಾಡಿಲ್ಲ. ಕೇಂದ್ರಸರ್ಕಾರದಿಂದ ನಮ್ಮ ಹಕ್ಕಿನ ಮೇಲೆ ಬಂದಂತಹ ಹಣ ಎಷ್ಟು ? ಎಂಬುದನ್ನು ತಿಳಿಸಬೇಕು. ಯಾವ ಯಾವ ಬಾಬಿನ ಮೇಲೆ ಎಷ್ಟೆಷ್ಟು ಹಣವನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆಂಬುದನ್ನು ದಯಮಾಡಿ ವಿವರಗಳನ್ನು ಕೊಡಿ. ಅದು ನಮಗೆ ಗೊತ್ತಾಗಬೇಕು. ನಾವು ಸರ್ಕಾರಕ್ಕೆ ಕೊಡತಕ್ಕಂಥ ತೆರಿಗೆಯಲ್ಲಿ ಯಾವ ಯಾವ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ನೇರವಾಗಿ ಬಂದಂತಹ ಸಹಾಯ ಎಷ್ಟು ? ಎಂಬುದನ್ನು ತಿಳಿಸಬೇಕು. ನನಗೆ ತಿಳಿದ ಹಾಗೆ ಕೇಂದ್ರ ಸರ್ಕಾರದ ಯೋಜನೆಗಳ ಪ್ರಕಾರ ಜನತಾ ಗೃಹ ನಿರ್ಮಾಣ ಯೋಜನೆಗೆ ಹಾಗೂ ಇತರೇ ಯೋಜನೆಗಳಿಗೆ ಹಣವನ್ನು ಕೊಡುತ್ತಿದ್ದಾರೆ.

1. Integrated Subsidised Housing Scheme for Industrial Workers and economically weaker sections of the community.
2. Low Income Housing Scheme.
3. Middle Income Housing Scheme.
4. Subsidised Housing for the Plantation Workers.
5. Rental Housing Scheme for State Government employees.
6. Slum Clearance Scheme.
7. Land Acquisition and Development Scheme.
8. Provision of House Sites to landless workers in Rural areas.

ಶ್ರೀ ಡಿ. ದೇವರಾಜ್ ಅರಸ್ ;—ತಾವು ಏನು ಹೇಳಿದಿರಿ ಅದನ್ನು ಕೊಡಿ ಸ್ವಾಮಿ. ತಾವು ಹೇಳಿದ್ದರಲ್ಲಿ ಈಗ ಯಾವುದೂ ಇಲ್ಲ. ನಿಂತುಹೋಗಿವೆ,

ಶ್ರೀ ಎಸ್. ಎಂ. ಯಾಹ್ಯಾ ;—೧೪ ನಮ್ಮದು, ೬ ಹುಡ್ಕೋ ಸ್ಕೀಮನಲ್ಲಿ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ ;—ಇದರಲ್ಲಿ ನಮ್ಮ ಹಕ್ಕು ಇದೆ. ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ನಿಮಗೆ ಎಷ್ಟು ಗೌರವ ಬೇಕೋ ಅಷ್ಟನ್ನೂ ಕೊಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ ;—ಹಿಂದಿನ ೫ ವರ್ಷಗಳಲ್ಲಿ ಕೇಂದ್ರದಿಂದ ಈ ಜನತಾ ಗೃಹ ನಿರ್ಮಾಣ ಯೋಜನೆಗೆ ಬಂದಂತಹ ಹಣ ಎಷ್ಟು ? ಕಳೆದ ೨ ವರ್ಷಗಳಲ್ಲಿ ಕೇಂದ್ರದಿಂದ ಬಂದಂತಹ ಹಣ ಎಷ್ಟು ? ಅದನ್ನು ಹೇಳಿ. ಕೇಂದ್ರಸರ್ಕಾರದ ಧೋರಣೆಯಲ್ಲಿ ಬಹಳ ಬದಲಾವಣೆಯಾಗಿದೆ. ರಾಜ್ಯಸರ್ಕಾರಗಳಿಗೆ ಹೆಚ್ಚು ಹೆಚ್ಚು ಹಣ ಸಹಾಯವನ್ನು ಕೊಡುತ್ತಿದ್ದಾರೆ. ನನಗೆ ಗೊತ್ತಿರುವ ಅಂಕಿ ಸಂಖ್ಯೆಗಳ ಪ್ರಕಾರ ಕೇಂದ್ರದಿಂದ ಹೋದ ಸಲ ೮೦ ಕೋಟಿಯಲ್ಲಿ ೬೬ ಕೋಟಿ ರೂಪಾಯಿಗಳು ಸಹಾಯ ಧನದ ರೂಪದಲ್ಲಿ ಬರುತ್ತಿದೆ. ಈ ಸಾರಿ ಈಗಾಗಲೇ ೫೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ವರಮಾನ ತೆರಿಗೆಯಲ್ಲಿ ೬ ಕೋಟಿ ರೂಪಾಯಿಗಳು ಹೆಚ್ಚಿಗೆ ಬಂದಿದೆ. ಇದು ಕೇಂದ್ರಸರ್ಕಾರದ ಧೋರಣೆಯಲ್ಲಿ ಆದಂತಹ ಬದಲಾವಣೆಯಿಂದ ಬಂದಿದೆ.

ಶ್ರೀ ಎಸ್. ಎಂ. ಯಾಹ್ಯಾ ;—ಇದು ಸೆಂಟ್ರಲ್ ಫೈನಾನ್ಸ್ ಕಮೀಷನ್‌ನಿಂದ ಬಂದಿದೆ, ೭ನೇ ಫೈನಾನ್ಸ್ ಕಮೀಷನ್ ಬಂದದ್ದು, ಕೇಂದ್ರದಲ್ಲಿ ಹೊಸ ಸರ್ಕಾರ ಬಂದ ಮೇಲೆ ಸ್ಟೇಟ್ ಮೆಮೋರ್‍ಯಾಂಡಂ ಅನ್ನು ಕೊಟ್ಟಿದ್ದು ನೋಡಿದ್ದೇವೆ. ಹಿಂದೆ ಇದ್ದುದನ್ನು ನೋಡಿದ್ದೇವೆ, ಒತ್ತಾಯ ಮಾಡಿದ್ದೇವೆ. ಎಷ್ಟೋ ವಿಚಾರಗಳಲ್ಲಿ ಫೈನಾನ್ಸ್ ಕಮೀಷನ್ ಮಾಡಿದ ಶಿಫಾರಸುಗಳನ್ನು ಕೇಂದ್ರ ಸರ್ಕಾರದವರು ಒಪ್ಪಿಲ್ಲ. ಎಲ್ಲಾ ಶಿಫಾರಸುಗಳನ್ನು ಒಪ್ಪಿರಲಿಕ್ಕೆ ಇಲ್ಲ. ಈಗ ರಾಜ್ಯಕ್ಕೆ ಅಧಿಕ ಮೊತ್ತದಲ್ಲಿ ಹಣ ಬರತಕ್ಕ ವ್ಯವಸ್ಥೆಯಾಗಿದೆ. ಅಂದರೆ ಒಂದೇ ರಾಜ್ಯಕ್ಕೆ ಅಲ್ಲ, ಎಲ್ಲಾ ರಾಜ್ಯಗಳಿಗೂ ಆಗಿದೆ. ಬದಲಾದ ಆ ನೀತಿಯನ್ನು ಸ್ವಾಗತ ಮಾಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್ :— ಆ ನೀತಿಯನ್ನು ಬದಲಾವಣೆ ಮಾಡುವುದಕ್ಕೆ ಒತ್ತಾಯಮಾಡಿ ಮಾಡಿಸಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ :—ನೀವು ಹಿಂದೆಲ್ಲ ಎಷ್ಟೇ ಒತ್ತಾಯಗಳನ್ನು ಮಾಡಿದರೂ ಮಾಡಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಮಾಡಿದೆ. ನೀವು ಮೊದಲಿನಿಂದಲೂ ಒತ್ತಾಯ ಮಾಡುತ್ತಲೇ ಇದ್ದಿರಿ ಅದಕ್ಕೆ ಆಗಿನ ಪ್ರಧಾನಿಗಳು ಒಪ್ಪಿರಲಿಲ್ಲ ; ಈಗಿನ ಪ್ರಧಾನಿಗಳು ಒಪ್ಪಿದ್ದಾರೆ. ಇಷ್ಟೇ ವ್ಯತ್ಯಾಸ.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಹಣಕಾಸು ಸಚಿವರು ತಮ್ಮ ಭಾಷಣದಲ್ಲಿ ನಮ್ಮ ರಾಜ್ಯದಲ್ಲಿ ಓದು ಬರಹ ಬಲ್ಲವರ ಸಂಖ್ಯೆ ಶೇಕಡ ೩೧ ಎಂದು ಹೇಳಿದ್ದಾರೆ. ಅದು ಬಹಳ ದುರ್ದೈವದ ಸಂಗತಿ. ಸ್ವಾತಂತ್ರ್ಯ ಬಂದು ೩೨ ವರ್ಷಗಳಾದರೂ ಕೂಡ ನಮಗೆ ಪ್ರತಿಯೊಬ್ಬರಿಗೂ ಓದುಬರಹವನ್ನು ಕಲಿಸಲಿಕ್ಕೆ ಸಾಧ್ಯವಾಗಿಲ್ಲ. ಇದು ಈ ಒಂದೇ ರಾಜ್ಯದಲ್ಲಿ ಅಲ್ಲ ; ಎಲ್ಲ ರಾಜ್ಯಗಳಲ್ಲು ಇದೆ ; ಕೆಲವು ರಾಜ್ಯಗಳಲ್ಲಿ ಹೆಚ್ಚಾಗಿದೆ. ಇವತ್ತಿನ ದಿವಸ ನಮ್ಮ ಸಂವಿಧಾನದ ಪ್ರಕಾರ ೬ರಿಂದ ೧೪ ವರ್ಷ ವಯೋಮಿತಿಯೊಳಗಿರುವ ಮಕ್ಕಳಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕಾಗಿದೆ. ಇಲ್ಲಿ ತಾವೇನು ಒಂದು ಲೆಕ್ಕವನ್ನು ಕೊಟ್ಟಿದ್ದೀರಿ, ಅದರ ಪ್ರಕಾರ ಮಕ್ಕಳ ಸಂಖ್ಯೆ ೧.೧೦ ಕೋಟಿಯಾದರೆ ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆ ೪೬.೨೯ ಸಾವಿರ. ಅಂದರೆ ಸುಮಾರು ಶೇಕಡ ೫೪ ರಷ್ಟು ಮಂದಿ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಈ ಒಂದು ವಿಚಾರವನ್ನು ನಾನು ಪದೇ ಪದೇ ಒತ್ತಿ ಹೇಳುತ್ತಿದ್ದೇನೆ. ನಾವು ಹಸಿರು ಕ್ರಾಂತಿ, ಬಿಳಿ ಕ್ರಾಂತಿ, ಔದ್ಯೋಗಿಕ ಕ್ರಾಂತಿ ಹೀಗೆ ಎಲ್ಲಾ ಕ್ರಾಂತಿಗಳ ಬಗ್ಗೆಯೂ ಮಾತನಾಡುತ್ತೇವೆ. ಆದರೆ ನನ್ನ ತಿಳುವಳಿಕೆ ಮಟ್ಟಿಗೆ ಮುಖ್ಯವಾಗಿ ನಮ್ಮ ದೇಶಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕದ್ದು ಅಕ್ಷರ ಕ್ರಾಂತಿ. ಈ ಒಂದು ಕ್ರಾಂತಿಯಾದರೆ ಮಕ್ಕಳು ತಮ್ಮ ತಮ್ಮ ಬೆಳವಣಿಗೆ ಬಗ್ಗೆ ಹಾಗೂ ಈ ಅನೇಕ ವಿಚಾರಗಳ ಬಗ್ಗೆ ಅವು ಕಾರ್ಯರೂಪಕ್ಕೆ ತೊಡಗುತ್ತದೆ ಈ ದೃಷ್ಟಿಯಿಂದ ನೋಡಿದಾಗ ಸುಮಾರು ೫೦–೬೦ ಲಕ್ಷ ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಅದಕ್ಕೆ ಕಾರಣಗಳು ಅನೇಕ ಇವೆ.

ಬಡತನ, ತಂದೆ—ತಾಯಿಗಳಿಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದು, ಶಾಲೆಗಳಿಗೆ ಹೋಗಲಿಕ್ಕೆ ಸರಿಯಾದ ವ್ಯವಸ್ಥೆ ಇಲ್ಲದಿರುವುದು ; ಹೀಗಾಗಿ ಇದರಲ್ಲಿ ಬಹಳ ಹಿಂದೆ ಬೀಳಲಾಗಿದೆ. ಇವನ್ನು ಪರಿಹರಿಸತಕ್ಕ ಒಂದು ವ್ಯವಸ್ಥೆಯಾಗಬೇಕು. ನಾವು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವುದು ೧೪೬ ಕೋಟಿ ರೂಪಾಯಿಗಳು. ಅದರಲ್ಲಿ ಹೆಚ್ಚಾಗಿ ವಿಶ್ವವಿದ್ಯಾನಿಲಯಗಳಿಗೆ, ಕಾಲೇಜುಗಳಿಗೆ ಹಾಗೂ ಹೈಸ್ಕೂಲುಗಳಿಗೆ ಖರ್ಚು ಮಾಡತಕ್ಕದ್ದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಮಕ್ಕಳಿಗೆ ಅಕ್ಷರ ಜ್ಞಾನ ನೀಡುವುದಕ್ಕೆ ಬಹಳ ಕಡಿಮೆ ಖರ್ಚು ಮಾಡಲಾಗುತ್ತಿದೆ. ಈ ಬಾಬಿಗಾಗಿ ಶೇಕಡ ೧೦-೧೫ ರಷ್ಟು ಮಾತ್ರ ಖರ್ಚು ಮಾಡಲಾಗುತ್ತಿದೆ. ಆದ್ದರಿಂದ ಈ ಬಾಬಿಗೆ ಹೆಚ್ಚೆಚ್ಚು ಹಣವನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಶಾಲಾ ಕಟ್ಟಡಗಳನ್ನು ನೋಡಬೇಕು. ಅವುಗಳ ವ್ಯವಸ್ಥೆಯಂತೂ ಹೇಳತೀರದು. ಉದಾಹರಣೆಗೆ ಹೇಳುವುದಾದರೆ, ನಮ್ಮ ಹುಬ್ಬಳ್ಳಿ ಏರಿಯಾದಲ್ಲಿರತಕ್ಕ ಒಂದು ಹೆಣ್ಣು ಮಕ್ಕಳ ಶಾಲೆ ಟೇಕನ್ ಓವರ್ ಆಗಿದೆ. ಅಲ್ಲಿಗೆ ಒಮ್ಮೆ ಒಬ್ಬರು ಸ್ಥಳೀಯ ಅಧಿಕಾರಿಗಳನ್ನು ಕರೆದುಕೊಂಡು ಹೋದೆ. ಅಲ್ಲಿ ಇರತಕ್ಕ ವಿದ್ಯಾರ್ಥಿನಿಯರ ಸಂಖ್ಯೆ ನೋಡಿದರೆ ೧೨೦೦ ಆದರೆ ಅಲ್ಲಿರತಕ್ಕದ್ದು ಕೇವಲ ೬ ಕೊಠಡಿಗಳು. ಅದೂ ಕೂಡ ಸುಮಾರು ಒಂದು ನೂರು ವರ್ಷದ ಹಿಂದಿನ ಕಟ್ಟಡ ; ಅದು ಯಾವಾಗ ಬೀಳುತ್ತದೋ ಗೊತ್ತಿಲ್ಲ. ಅಲ್ಲಿ ಕುಡಿಯಲಿಕ್ಕೆ ನೀರು ಇಲ್ಲ ; ಮೂತ್ರ ವ್ಯವಸ್ಥೆ ಇಲ್ಲ. –

ಶ್ರೀ ಡಿ. ದೇವರಾಜ ಅರಸ್ :—ಆ ಶಾಲೆಗೆ ತಕ್ಷಣ ಸೂಕ್ತ ವ್ಯವಸ್ಥೆ ಮಾಡುವಂತೆ ನಾನು ಅಲ್ಲಿನ ಜಿಲ್ಲಾಧಿಕಾರಿಗಳೊಡನೆ ಮಾತನಾಡಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ :—ಸಾಮಾನ್ಯವಾಗಿ ಯಾವ ಶಾಲೆಗಳಲ್ಲಾದರೂ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕಟ್ಟಡದ ವ್ಯವಸ್ಥೆ ಇರುವುದಿಲ್ಲ: ಇವತ್ತಿನ ದಿವಸ ೫೦ ಮಕ್ಕಳಿಗೆ ಒಂದು ಕೊಠಡಿ ಇರಬೇಕೆಂಬ ನಿಯಮ ಇದೆ. ಎಷ್ಟೋ ಕಡೆ ಸಾವಿರಾರು ಮಕ್ಕಳಿಗೆ ಸರಿಯಾಗಿ ಕುಳಿತುಕೊಳ್ಳತಕ್ಕ ವ್ಯವಸ್ಥೆ ಇರುವುದಿಲ್ಲ. ಹುಬ್ಬಳ್ಳಿ ಮಟ್ಟಿಗೆ ಹೇಳುವುದಾದರೆ ಅಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಸುಮಾರು ೫೦೦ ಕೊಠಡಿಗಳನ್ನು ಕಟ್ಟಿಸಿ ಕೊಡಬೇಕಾದ ಪರಿಸ್ಥಿತಿ ಇದೆ ಇಲ್ಲದಿದ್ದರೆ ಅವರು ಅಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದೇ ಸ್ಥಿತಿ ಹಳ್ಳಿಗಳ ಕಡೆ ಕೂಡ ಇದೆ. ಸಾಕಷ್ಟು ಕೊಠಡಿಗಳನ್ನು ಒದಗಿಸಲಿಕ್ಕೆ ಏನು ತೊಂದರೆ ಇದೆ ಎಂದು ಕೇಳುತ್ತೇನೆ. ಶಾಲಾ ಕಟ್ಟಡಕ್ಕೆ ೪ ಸಾವಿರ ರೂಪಾಯಿಗಳವರೆಗೆ ಕಾಂಟ್ರಿಬ್ಯೂಷನ್ ಕೂಡ ಹೆಚ್ಚು ಮಾಡಿದ್ದೀರಿ, ಆದರೂ ಕೂಡ ಸಾಕಷ್ಟು ಸ್ಥಳಾವಕಾಶವನ್ನು ಏಕೆ ಒದಗಿಸುತ್ತಿಲ್ಲ ? ಕಪ್ಪು ಭೂಮಿಯಲ್ಲೇನೋ ಕಟ್ಟಡಗಳನ್ನು ಕಟ್ಟುವುದು ಕಷ್ಟ. ಆದರೂ ಕೂಡ ಕಪ್ಪು ಭೂಮಿಯಲ್ಲಿ ಕಟ್ಟುವುದಕ್ಕೆ ಬೇರೆ ವ್ಯವಸ್ಥೆ ಇದೆ ಮತ್ತು ಕೆಂಪು ಭೂಮಿಯಲ್ಲಿ ಕಟ್ಟುವುದಕ್ಕೆ ಬೇರೆ ವ್ಯವಸ್ಥೆ ಇದೆ. ಕಡಿಮೆ ಎಂದರೆ ಒಂದು ಕಟ್ಟಡಕ್ಕೆ ೧೦ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಆದರೆ ನೀವು ಸುಮ್ಮನೆ ೪ ಸಾವಿರ ರೂಪಾಯಿ ಕಾಂಟ್ರಿಬ್ಯೂಷನ್ ಎಂದು ಮಾಡಿದ್ದೀರಿ. ಅದರಲ್ಲಿ ಅವಸರವಸರವಾಗಿ ೪ ಕೊಠಡಿಗಳನ್ನು ಕಟ್ಟುತ್ತಾರೆ. ಅದರಿಂದ ಆಗತಕ್ಕ ಪ್ರಯೋಜನ ಬಹಳ ಕಡಿಮೆ. ಒಟ್ಟನಲ್ಲಿ, ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಸರ್ಕಾರ ನಿರ್ಲಕ್ಷಿಸಿದೆ, ತನ್ನ ಕರ್ತವ್ಯ ಚ್ಯುತಿ ಮಾಡಿದೆ ಎಂದರೆ ತಪ್ಪಾಗಲಾರದು. ಇವತ್ತಿನ ದಿವಸ ಹುಡುಗರ ಸಂಖ್ಯೆಗೆ ಅನುಗುಣವಾಗಿ ಶಾಲಾ ಕೊಠಡಿಗಳ ವ್ಯವಸ್ಥೆ ಇಲ್ಲ. ಅದನ್ನು ಮಾಡತಕ್ಕ ಜವಾಬ್ದಾರಿ ಸರ್ಕಾರದ್ದು ಅದು ಕಾನ್‌ಸ್ಟಿಟ್ಯೂಷನಲ್ ಅಬ್ಲಿಗೇಷನ್. ಆ ಒಂದು ಪವಿತ್ರ ಕರ್ತವ್ಯವನ್ನು ಮಾಡತಕ್ಕ ವಿಚಾರವನ್ನು ತಾವು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈ ಶಿಕ್ಷಣ ಇಲಾಖೆಯ ಬಗ್ಗೆ ವಿವರವಾಗಿ ಬೇಡಿಕೆಗಳು ಬಂದಾಗ ಹೇಳತಕ್ಕ ವಿಚಾರಗಳನ್ನು ಹೇಳುತ್ತೇನೆ. ಈಗ ಒಂದು ಮಾತನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳಬೇಕಾಗಿದೆ ವಿಶ್ವವಿದ್ಯಾನಿಲಯಗಳ ಹಾಗೂ ಕಾಲೇಜುಗಳ ಸಂಖ್ಯೆ ಜಾಸ್ತಿಯಾಗಿದೆ. ಒಂದೊಂದು ಕಾಲೇಜಿನಲ್ಲೂ ಸುಮಾರು ೨-೫ ಸಾವಿರ ವಿದ್ಯಾರ್ಥಿಗಳಿದ್ದಾರೆ. ಈ ಬಗ್ಗೆ ಸರ್ಕಾರದ ಒಂದು ಕರಿಕ್ಯುಲಮ್ ಏನಿದೆ ಅದನ್ನು ಬದಲಾವಣೆ ಮಾಡತಕ್ಕ ಆಲೋಚನೆ ಏನಾದರೂ ಇದೆಯೋ ಎಂದು ಕೇಳಬಯಸುತ್ತೇನೆ. ಅಥವಾ ಇದೇ ರೀತಿ ನಿರುದ್ಯೋಗಿ ಪದವೀಧರರನ್ನು ಹಾಗೂ ವಿದ್ಯಾವಂತರನ್ನು ರೂಪಿಸತಕ್ಕ ಕಾರ್ಖಾನೆಗಳಾದ ಕಾಲೇಜುಗಳನ್ನು ಹಾಗೂ ವಿಶ್ವವಿದ್ಯಾನಿಲಯಗಳನ್ನು ಮುಂದುವರೆಸಿಕೊಂಡು ಹೋಗುತ್ತೀರಾ ? ಇದರ ಬಗ್ಗೆ ಅನೇಕ ರಾಜ್ಯಗಳಲ್ಲಿ ಬದಲಾವಣೆ ನಡೆಯುತ್ತಿದೆ. ಅಲ್ಲಿ ಜಾಬ್‌ಓರಿಯಂಟೆಡ್ ಎಜುಕೇಷನ್ ಕೊಡುತ್ತಿದ್ದಾರೆ.

(Mr. Speaker in the Chair)

ಪಂಜಾಬ್‌ನಲ್ಲಿ ಮತ್ತು ಹರಿಯಾಣದಲ್ಲಿ ಈ ಕೃಷಿಯು ಒಂದು ಪ್ರಯೋಗ ಬಹಳ ಬದಲಾವಣೆ ಯಾಗುತ್ತಾ ಇದೆ. ಅಲ್ಲಿ ಕಾಲೇಜಿನಲ್ಲಿರುವ ಸಂಖ್ಯೆ ಎಷ್ಟು ಇದೆಯೋ ಅಷ್ಟು ನಮ್ಮಲ್ಲಿಲ್ಲ. ಮೆಡಿಕಲ್ ಕಾಲೇಜಿನಲ್ಲಿ, ಇಂಜನೀಯರಿಂಗ್ ಕಾಲೇಜಿನಲ್ಲಿ ಮತ್ತು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಓದುತ್ತಾ ಇದ್ದಾರೆ. ಈವೊತ್ತಿನ ದಿವಸ ಪಂಜಾಬಿನ ಒಂದು ಕೃಷಿ ವಿಶ್ವವಿದ್ಯಾನಿಲಯ ತೆಗೆದುಕೊಂಡರೆ ಅಲ್ಲಿ ಒಬ್ಬ ರೈತನಿಗೂ ಮತ್ತು ಕೃಷಿ ವಿಶ್ವವಿದ್ಯಾನಿಲಯಕ್ಕೂ ಎಷ್ಟರಮಟ್ಟಿಗೆ ಒಂದು ಡೈರೆಕ್ಟ್ ಕಾಂಟ್ಯಾಕ್ಟ್ ಇದೆ ಎಂದರೆ ಅಲ್ಲಿಯ ರೈತ ಈ ಒಂದು ಕೃಷಿ ವಿಶ್ವವಿದ್ಯಾನಿಲಯದ ಒಂದು ಸಂಪರ್ಕವನ್ನಿಟ್ಟುಕೊಂಡು ಕೂಲಂಕಷವಾಗಿ ಚರ್ಚಿಸಿ ಹೊಸ ಹೊಸ ಬೀಜಗಳನ್ನು ರೀಸರ್ಚ್ ಮಾಡು ತ್ತಾನೆ, ಅಷ್ಟೇ ಅಲ್ಲದೆ ಈ ಬೆಳೆಗಳಿಗೆ ಔಷಧಿ ಸಿಂಪರಿಸುವುದು ಮತ್ತು ಇನ್ನೂ ಅನೇಕ ವಿಧವಾದಂಥಾ ಪ್ರಯೋಗಗಳನ್ನು ಮಾಡಿ ಈ ಬಗ್ಗೆ ಅಲ್ಲಿಯ ಆಫೀಸರ್ಸ್ ಜೊತೆಯಲ್ಲಿ ಚರ್ಚಿಸಿ ಹೊಸ ವಿಧಾನಗಳ ಒಂದು ಬೀಜೋತ್ಪಾದನೆ ವಗೈರೆಗಳನ್ನು ಕಂಡುಹಿಡಿದು ಅದನ್ನು ಅಲ್ಲಿ ಹಂಚುತ್ತಾರೆ. ಆದುದರಿಂದ ಅಲ್ಲಿ ಈ ಕೃಷಿ ವಿಧಾನದಲ್ಲಿ ಹೆಚ್ಚು ಹೆಚ್ಚು ರೀಸರ್ಚ್ ಮಾಡಿ ಇತರರಿಗೆ ಹಂಚುತ್ತಾ ಇರುವುದರಿಂದ ಅಲ್ಲಿ ಕೃಷಿ ವಿಧಾನ ಬಹಳವಾಗಿ ಮುಂದುವರೆದುಕೊಂಡು ಹೋಗುತ್ತಾ ಇದೆ. ತಮಗೆ ಹೇಳಬೇಕಾದರೆ ಒಂದು ಸಲ I had been to the Punjab Agricultural University. There is direct contact between the agriculturist and research centres. ಆದರೆ ಆ ತರಹ ರೀಸರ್ಚ್ ಸೆಂಟರ್ಸ್ ಇಲ್ಲಿ ಇಲ್ಲಾ. ಆದುದರಿಂದ ಇಲ್ಲಿ ಸರಿಯಾಗಿ ಪ್ರಯೋಗ ಮಾಡದೇ ಇದ್ದಂಥಾ ಬೀಜ ಗಳನ್ನುಕೊಡುವುದರಿಂದ ಅದನ್ನು ಇಲ್ಲಿಹಾಕಿದರೆ ದೇವರೇ ಗತಿ. ನಿಮಗೆ ಹೇಳಬೇಕಾದರೆ ನಮ್ಮಲ್ಲಿ ಕಾಟನ್ ಸೀಡ್ಸ್ ಬಗ್ಗೆ ಒಂದು ಪ್ರಯೋಗ ನಡೆಯಿತು. ಹೊಸಬೀಜವನ್ನು ಜನವರಿ ತಿಂಗಳಿನಲ್ಲಿ ಎಲ್ಲರಿಗೂ ಹಂಚಿದರು. ಅದು ಸರಿಯಾಗಿ ಹುಟ್ಟಲಿಲ್ಲಾ. ಇವರು ಯಾವರೀತಿ ರೀಸರ್ಚ್ ಮಾಡಿದ್ದಾರೆ ಅನ್ನು ವುದನ್ನು ನೋಡಿ. ಇನ್ನು ಈ ವಿಶ್ವವಿದ್ಯಾನಿಲಯದ ಕಟ್ಟಡದ ಬಗ್ಗೆ ಹೇಳುವುದಾದರೆ ಮೊನ್ನೆ ತಾನೇ ನಾನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ಕೊಟ್ಟಿದ್ದೆ. ಅಲ್ಲಿ ಸುಮಾರು ೭೦–೮೦ ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಡವನ್ನು ಕಟ್ಟಿದ್ದಾರೆ. ಅದನ್ನು ೩ ವರ್ಷದ ಹಿಂದೆ ಇದ್ದಂಥಾ ಪ್ರಧಾನ ಮಂತ್ರಿಗಳು ಉದ್ಘಾಟನೆ ಮಾಡಿದ್ದಾರೆ. ಹಿಂದೆ ಕಟ್ಟಿದಂಥಾ ವಿಶ್ವವಿದ್ಯಾನಿಲಯದ ಕಟ್ಟಡವನ್ನೂ ನೋಡಿ. ಇದನ್ನು ನೋಡಿ ಹಿಂದೆ ಕಟ್ಟಿರುವಂಥಾ ಕಟ್ಟಡಗಳು ಹೇಗಿತ್ತು ಎಂದರೆ ಸಾವಿರಾರು ವರ್ಷಗಳಾದರೂ ಕೂಡ ಚೆನ್ನಾಗಿರುತ್ತಿತ್ತು. ಕಾರಣ ಈ ಒಂದು ವಿಶ್ವವಿದ್ಯಾನಿಲಯ ಅನ್ನುವ ಹೆಸರು ಅಷ್ಟು ಚೆನ್ನಾಗಿ ಬೆಳಸಿ ಕೊಂಡು ಹೋಗಬೇಕು ಅಂತ ಒಂದು ಮಾದರಿಯಾಗಿ ಕಟ್ಟುತ್ತಿದ್ದರು, ಮತ್ತು ಆ ಸಂಪ್ರದಾಯವನ್ನೇ ಅವರೂ ಕೂಡ ಮುಂದುವರೆಸಿಕೊಂಡು ಹೋಗುತ್ತಿದ್ದರು. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ ಸೆಂಟ್ರಲ್ ಕಾಲೇಜ್ ಕಟ್ಟಡ ನೋಡಿ ಆಮೇಲೆ ನಮ್ಮ ಭಾಗದಲ್ಲಿರುವ ಕರ್ನಾಟಕ ವಿಶ್ವವಿದ್ಯಾನಿಲಯದ ಕಾಲೇಜಿನ ಕಟ್ಟಡ ನೋಡಿ ಮತ್ತು ಅದೆ ರೀತಿಯಾಗಿ ಉಸ್ಮಾನಿಯಾ ಕಾಲೇಜಿನ ಕಟ್ಟಡ ನೋಡಿದರೆ ಗೊತ್ತಾಗುತ್ತದೆ ಹಿಂದೆ ಈ ಕಟ್ಟಡಗಳನ್ನೆಲ್ಲಾ ಎಷ್ಟರಮಟ್ಟಿಗೆ ಚೆನ್ನಾಗಿ ಕಟ್ಟಿದ್ದರು ನೋಡಿ ಈಗ ಇವುಗಳ ರಿಪೇರಿ ವಗೈರೆ ಒಂದು ಆಗದೇ ಇರುವುದರಿಂದ ಆ ಕಟ್ಟಡಗಳು ಮಳೆನೀರಿನಿಂದ ಸೋರುತ್ತಾ ಇವೆ. ಅಷ್ಟೆ ಅಲ್ಲ ಆ ಕಟ್ಟಡಗಳ ಕಿಟಕಿ ಬಾಗಿಲುಗಳು ಏನು ಇವೆ ಅವುಗಳನ್ನು ರೀಪ್ಲೇಸ್ ಮಾಡದೇ ಹೋದರೆ ಇನ್ನು ೩ವರ್ಷಗಳೊಳಗೆ ಅವೆಲ್ಲಾ ಓಪನ್ ಡೋರ್ ಆಗಿ ಬಿಡುತ್ತದೆ. ನಾವು ಯುವಕರನ್ನು ಟೀಕೆ ಮಾಡುತ್ತೇವೆ. ಅವರುಗಳು ಇರತಕ್ಕಂಥಾ ಹಾಸ್ಟಲುಗಳನ್ನು ಹೋಗಿ ನೋಡಿದರೆ ಗೊತ್ತಾಗುತ್ತದೆ. ಸುಮಾರು ೪೦೦ ಜನ ಇರತಕ್ಕಂಥಾ ಹಾಸ್ಟಲ್‌ನಲ್ಲಿ ಏನು ಒಂದು ಡೈನಿಂಗ್ ಹಾಲ್ ಇದೆ ಅದನ್ನು ನೋಡಿದರೆ ಗೊತ್ತಾ ಗುತ್ತ ಅದು ಸ್ಲಮ್ ಏರಿಯಾದಲ್ಲಿರತಕ್ಕಂಥಾ ಕಡೆ ಇದೆ. ಆ ಡೈನಿಂಗ್ ಹಾಲ್‌ನಲ್ಲಿ ಒಂದು ಹೋಟೇಲ್ ಇದ್ದಹಾಗೆ ಇದೆ. ನೊಣ ವಗೈರೆ ಕೂತುಕೊಂಡು ಬೇಕಾದಷ್ಟು ಗಲೀಜುಗಳು ಇರುತ್ತವೆ. ನಮ್ಮ ಈ ಒಂದು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಇಂತಹ ಒಂದು ಮಹತ್ವದ ಸ್ಥಾನ ಕೊಟ್ಟು ಈ ತರಹ ಎಜುಕೇಷನ್ ಮಾಡಿಸುತ್ತಿದ್ದೀರಿ. ಅದೂ ಪೋಸ್ಟ್ ಗ್ರಾಜುಯೇಟ್‌ನಲ್ಲಿ ಓದುತ್ತಾ ಇರುವ ಹುಡುಗರಿಗೆ ಈ ತರಹ ಒಂದು ವ್ಯವಸ್ಥೆ ಮಾಡಿಕೊಟ್ಟಿದ್ದೀರಲ್ಲಾ. ಅವರ ವಿದ್ಯಾಭ್ಯಾಸ ಹೇಗಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ. ಅಷ್ಟೇ ಅಲ್ಲ, ಅವರಿಗೆ ಓದುವುದಕ್ಕೆ ಒಂದು ಟೇಬಲ್ ಇಲ್ಲ, ಸರಿಯಾದ ಒಂದು ನಾಟ್ ಇಲ್ಲ. ಒಂದೊಂದು ರೂಮಿಗೆ ೩–೪ ಜನರನ್ನು ಹಾಕಿಬಿಡುತ್ತೀರಿ. They have been dumped like cattle. ಪೋಸ್ಟ್ ಗ್ರಾಜುಯೆಟ್‌ನಲ್ಲಿ ಓದುತ್ತಾ ಇರತಕ್ಕಂಥಾ ಹುಡುಗರಿಗೆ ಈ ತರಹ ಒಂದು ವ್ಯವಸ್ಥೆ ಅವರ ಒಂದು ವಿದ್ಯಾಭ್ಯಾಸ ಮಟ್ಟದಲ್ಲಿ ಇದ್ದರೆ ಅವರು ಮುಂದೆ ಯಾವರೀತಿ ನಾಗರೀಕತೆ ಕಲಿತುಕೊಂಡು ಹೊರಗೆ ಬರುತ್ತಾರೆ ಅನ್ನುವುದನ್ನು ತಾವು ಸ್ವಲ್ಪ ಆಲೋಚನೆ ಮಾಡಿ

ನೋಡಿ. ಈ ಮಾತನ್ನು ನಾನು ಬಹಳ ಮನದೊಂದು ಹೇಳುತ್ತಿದ್ದೇನೆ. ಈ ವಿದ್ಯಾರ್ಥಿಗಳು ಕಾಲೇಜಿನಲ್ಲಿಯೋ ಓದಲಿ, ಹೈಸ್ಕೂಲ್‌ನಲ್ಲಿಯೋ ಓದಲಿ ಯಾವ ಶಾಲೆಯಲ್ಲಾದರೂ ಓದಲಿ ಹಾಸ್ಟಲನ್ನು ಏನು ತೆರೆಯುತ್ತೀರೋ ಅದು ಒಳ್ಳೆಯ ಮಟ್ಟದಲ್ಲಿ ಇರಬೇಕು ಎಂದು ಹೇಳುತ್ತೇನೆ. ಇದಕ್ಕಾಗಿ ತಾವು ಒಂದು ಕ್ರಾಂತಿಕಾರವಾದ ಯೋಜನೆಯನ್ನು ಹಾಕಿಕೊಳ್ಳಬೇಕು. ಹಾಗೆ ಮಾಡದೇ ಹೋದರೆ ಈ ವಿದ್ಯಾರ್ಥಿಗಳು ಮುಂದೆ ಒಳ್ಳೆಯ ನಾಗರೀಕತೆಯಾಗಿ ಬರುವುದಕ್ಕೆ ಸಾಧ್ಯವಿಲ್ಲಾ. ಈ ವಿಶ್ವವಿದ್ಯಾನಿಲಯಕ್ಕೆ ಖರ್ಚು ಮಾಡಲು ನೀವೇನೋ ಹಣ ಕೊಡುತ್ತೀರಿ ಆದರೆ ಅದು ಎಷ್ಟರಮಟ್ಟಿಗೆ ವಿನಿಯೋಗವಾಗುತ್ತದೆ ಅನ್ನುವುದನ್ನು ನೋಡಬೇಕು. ನೀವು ಇದಕ್ಕೆ ಖರ್ಚುಮಾಡುವ ಹಣ ಇದು ನಮ್ಮ ಸಮಾಜದ ಮುಂದಿನ ಒಂದು ಭವಿಷ್ಯದ ಮೇಲೆ ನಿಂತಿರುತ್ತದೆ ಅನ್ನುವ ಮಾತನ್ನು ಹೇಳುತ್ತೇನೆ.

Sir, I want some more time to speak on the next subject.

SRI S.M. SHEERANALLY CHANDRASHEKHAR.—You can take more time to-morrow, but not to-day. It may be closed at 6 P.M. as we have other engagements.

ಅಧ್ಯಕ್ಷರು.—ಆರು ಗಂಟೆಗೆ ಇನ್ನೂ ೫ ನಿಮಿಷ ಇದೆ, ತಾವು ಭಾಷಣವನ್ನು ಮುಂದುವರೆಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಇನ್ನು ನಾನು ನಮ್ಮ ರಾಜ್ಯದ ಕೈಗಾರಿಕೆಗಳ ಬಗ್ಗೆ ಮಾತನಾಡಬೇಕಾಗಿದೆ. ಇದರಲ್ಲಿ ಕೆಲವು ಉದ್ದಿಮೆಗಳು ಸರ್ಕಾರೀ ಒಡೆತನದಲ್ಲಿ ಕೆಲಸ ಮಾಡುತ್ತಾ ಇವೆ. ಇನ್ನು ಕೆಲವು ಉದ್ದಿಮೆಗಳು ಖಾಸಗೀ ಒಡೆತನದಲ್ಲಿ ಕೆಲಸ ಮಾಡುತ್ತಾ ಇದೆ ನಾನು ಮೊಟ್ಟಮೊದಲನೆಯದಾಗಿ ಖಾಸಗೀ ಒಡೆತನದಲ್ಲಿರುವ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಈ ಬಗ್ಗೆ ಏನು ಹೇಳಿದ್ದಾರೆ ಎಂದರೆ ನಾವು ಇಂಡಸ್ಟ್ರಿಯಲ್ ಎಸ್ಟೇಟ್ಸ್ ಮಾಡಿ ಅದರಲ್ಲಿ ಇಂಡಸ್ಟ್ರಿಯಲ್ ಷೆಡ್ಸ್ ಹಾಕಿ ಅವರಿಗೆ ಹಂಚಿದ್ದೇವೆ ಎಂದು. ಇದರ ಬಗ್ಗೆ ಅಂಕಿಅಂಶಗಳನ್ನೂ ಸಹ ಕೊಟ್ಟಿದ್ದಾರೆ. ನಾನು ಈಸಂದರ್ಭದಲ್ಲಿ ಅವರನ್ನು ಕೇಳಬಯಸುತ್ತೇನೆ. ಬೆಂಗಳೂರು ನಗರದ ಸುತ್ತಮುತ್ತ ಇರತಕ್ಕಂಥಾ ಇಂಡಸ್ಟ್ರಿಯಲ ಎಸ್ಟೇಟ ನಗೆ ಕೆಲಸ ಮಾಡುತ್ತಾ ಇರತಕ್ಕಂಥಾ ಉದ್ದಿಮೆಗಳಿಗೆ ಯಾವ ಮಂತ್ರಿಗಳಾದರೂ ಕೂಡ ಭೇಟಿ ಕೊಟ್ಟಿದ್ದಾರೆಯೋ ಇದು ನನ್ನ ಮೊದಲನೇ ಪ್ರಶ್ನೆ. ಈವೊತ್ತು ರಾಜ್ಯದಲ್ಲಿ ಕೈಗಾರಿಕಾ ಎಸ್ಟೇಟ್‌ಗಳಲ್ಲಿರುವ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳು ಏನು ಇವೆ ಅದರಲ್ಲಿ ಎಷ್ಟು ಉದ್ದಿಮೆಗಳು ಕೆಲಸ ಮಾಡುತ್ತಾ ಇವೆ? ಎಷ್ಟು ಮುಚ್ಚಿ ಹೋಗಿವೆ? ಈ ಬಗ್ಗೆ ಯಾರಾದರೂ ಲೆಕ್ಕಾಚಾರ ಹಾಕಿದ್ದಾರೆಯೇ? ನನಗೆ ಗೊತ್ತಿರುವ ಹಾಗೆ ಇದರಲ್ಲಿ ೧೦೦ಕ್ಕೆ ೭೦ ರಷ್ಟು ಇಂಡಸ್ಟ್ರಿಯಲ್ ಎಸ್ಟೇಟ್ಸ್ ನಲ್ಲಿರತಕ್ಕಂಥಾ ಸಣ್ಣ ಉದ್ದಿಮೆಗಳು ನಿಂತು ಹೋಗಿವೆ, ಅವುಗಳ ಬಾಗಿಲುಗಳು ಮುಚ್ಚಿವೆ. ಕೆಲವು ಉದ್ದಿಮೆಗಳು ಈವೊತ್ತಿನ ದಿವಸ ತಾವು ಬ್ಯಾಂಕಿನಿಂದ ತೆಗೆದುಕೊಂಡಿರತಕ್ಕಂಥಾ ಸಾಲಕ್ಕೆ ಬಡ್ಡಿ ಕಟ್ಟದೆ ಹಾಗೆಯೇ ನಿಂತಿರುವುದು ಕೆಲವು ಇವೆ, ಇನ್ನು ಕೆಲವು ಉದ್ದಿಮೆಗಳವರು ಅಲ್ಲಲ್ಲಿ ಸಾಲ ಮಾಡಿ, ಎಲ್ಲೆಲ್ಲಿ ಹಣ ಸಿಕ್ಕುತ್ತದೆ ಅಲ್ಲಲ್ಲಿ ಸಾಲ ಮಾಡಿ ಅದನ್ನು ಕಟ್ಟಲಾರದೆ ಮುಚ್ಚಿದ್ದಾರೆ. ನಿಮ್ಮ ಆಡಳಿತ ೭ ವರ್ಷಗಳಲ್ಲಿ ತಾವು ಕಟ್ಟಿದಂಥಾ ಷೆಡ್ಡುಗಳಲ್ಲಿ ಎಷ್ಟು ಕಡೆಗಳಲ್ಲಿ ಈ ಸಣ್ಣ ಉದ್ದಿಮೆಗಳು ನಡೆಯುತ್ತಾ ಇವೆ, ಎಷ್ಟು ಕಡೆಗಳಲ್ಲಿ ಈ ಉದ್ದಿಮೆಗಳು ಮುಚ್ಚಿವೆ ಎನ್ನುವುದನ್ನು ಹೇಳುತ್ತೀರಾ? Give an account as to how many industries are alive and working. ಎಷ್ಟು ಉದ್ದಿಮೆಗಳಲ್ಲಿ ಉತ್ಪಾದನೆಯಾಗುತ್ತಾ ಇದೆ, ಎಷ್ಟು ಜನ ಸ್ಟೇಟ್ ತೆಗೆದುಕೊಂಡು ಲೋನ್ ತೆಗೆದುಕೊಂಡು ಆ ಹಣವನ್ನು ಪಾವತಿ ಮಾಡಿದ್ದಾರೆ ಅನ್ನುವುದರ ಲೆಕ್ಕ ನೋಡಿದರೆ Almost all the industries have come to a standstill. ಕಾರಣ ಪವರ ಷಾರ್ಟೇಜ್ ಮತ್ತು ಇನ್ನೂ ಕೆಲವು ತೊಂದರೆಗಳಿರುವುದರಿಂದ ಮುಚ್ಚಿವೆ. ತಾವು ಇದನ್ನು ಯೋಚನೆ ಮಾಡಬೇಕು. ಇನ್ನು ತಾವು ನಿರುದ್ಯೋಗಿ ಇಂಜನಿಯರಿಂಗ್‌ಗೆ ಕೆಲಸ ಕೊಡುವುದಕ್ಕಾಗಿ ೨೦ ಪಾಯಿಂಟ್ ಪ್ರೋಗ್ರಾಂ ಪ್ರಕಾರ ಒಂದು ಯೋಜನೆ ಹಾಕಿಕೊಂಡಿದ್ದೀರಿ. ಆ ಪ್ರಕಾರ ಅವರುಗಳೂ ಕೂಡ ಬಹಳ ಆಶೆಯನ್ನಿಟ್ಟುಕೊಂಡು ಮುಂದೆ ಬಂದರು. ಸ್ವಾಮಿ, ನನಗೆ ಈ ವಿಷಯದಲ್ಲಿ ಮಾತನಾಡಲು ಇನ್ನೂ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಇದು ಈವೊತ್ತು ಮುಕ್ತಾಯವಾಗುವುದಿಲ್ಲ, ಆದುದರಿಂದ ಅವರು ನಾಳೆ ಮುಂದುವರೆಸಲಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಇನ್ನು ಸ್ವಲ್ಪ ಟೈಂ ತೆಗೆದುಕೊಂಡು ಬೇಕಾದರೆ ಮಾತನಾಡಲಿ ಇನ್ನು ೧೦-೧೫ ನಿಮಿಷ ಮಾತನಾಡಲಿ.

ಶ್ರೀ ಪಿ. ರಾಮದೇವ್.—ಸ್ವಾಮಿ, ಈವೊತ್ತಿನ ದಿವಸ ಆಟೋರಿಕ್ಷಾ ಡ್ರೈವರ್ಸ್ ಮುಷ್ಕರ ಹಾಡಿರುವುದರಿಂದ ನಮಗೆಲ್ಲಾ ವಾಹನ ಸೌಕರ್ಯ ಇಲ್ಲದೇ ಇರುವುದರಿಂದ ಅವರು ತಮ್ಮ, ಭಾಷಣವನ್ನು ನಾಳೆ ಮುಂದುವರೆಸಲಿ.

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಬೊಮ್ಮಾಯ್ಯನವರು ಬೇಕಾದರೆ ಇನ್ನೂ ಅರ್ಧಗಂಟೆ ಮಾತನಾಡಲಿ.

(ಕೆಲವು ಸದಸ್ಯರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಈವಾಗ ನಾನು ಹೇಳುವುದೇನೆಂದರೆ ಷೆಡ್ಯೂಲ್ ಪ್ರಕಾರ ಈ ಸಬ್ಜೆಕ್ಟ್‌ನ್ನು ಮುಗಿಸಲೇ ಬೇಕಾಗುತ್ತದೆ. ನಿನ್ನೆ ದಿವಸ ಇದರ ಕಾಲ ಆಗಲೇ ೨½ ಗಂಟೆ ಕಾಲ ಕಳೆದು ಹೋಗಿದೆ. ಹೆಚ್ಚು ಜನ ಸದಸ್ಯರು ಮಾತನಾಡಬೇಕಾದರೆ ಅವರು ತಮ್ಮ ಭಾಷಣವನ್ನು ಸ್ವಲ್ಪ ಸ್ವಲ್ಪ ಕಟ್ ಮಾಡಿಕೊಂಡು ಬೇಗ ಮುಗಿಸಬೇಕಾಗುತ್ತದೆ. ಒಟ್ಟಿನಲ್ಲಿ ೨೭ನೇ ತಾರೀಖಿನ ಒಳಗೆ ಈ ಎಲ್ಲ ಕಾರ್ಯಕ್ರಮಗಳನ್ನೂ ಮುಗಿಸಲೇ ಬೇಕಾಗುತ್ತದೆ. ಇದರ ಬಗ್ಗೆ ಇನ್ನು ವಾದ ವಿವಾದಗಳು ಬೇಡ.

ಶ್ರೀ ಬಿ. ಭಾಸ್ಕರಶೆಟ್ಟಿ.—ಎರಡು ಕಡೆಯಲ್ಲಿ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ, ಮಾನ್ಯ ವಿರೋಧಪಕ್ಷದ ನಾಯಕರು ಇವತ್ತೇ ತಮ್ಮ ಭಾಷಣವನ್ನು ಮುಗಿಸಿದರೆ ಒಳ್ಳೆಯದು.

ಶ್ರೀ ಮಳ್ಳೂರು ಆನಂದರಾವ್.—ಈಗ ಸಮಯ ಆರುಗಂಟೆಯಾಗುತ್ತಿದೆ. ಈ ದಿನಕ್ಕೆ ಸಭೆಯನ್ನು ಮುಕ್ತಾಯಮಾಡಿ, ನಾಳೆ ಸೇರುವುದು ಒಳ್ಳೆಯದು.

ಅಧ್ಯಕ್ಷರು.—ಈಗ ಇದರ ಬಗ್ಗೆ ಮಾತನಾಡುವುದು ಬೇಡ. ಸಭೆಯು ಈಗ ಎದ್ದು, ನಾಳೆ ಒಂದು ಗಂಟೆಗೆ ಸೇರುವುದು.

The House adjourned at Three Minutes past Six of the Clock to meet again at One of the Clock on Thursday the 22nd March 1979.